ನಯವಂಚಕಾಧಿಪತಿ ಹೆಗ್ಗಡೆ ಎಂಬ ಉಪಕುಲಪತಿ

ಆಗುವ ಹೋಗುವ ಒಬ್ಬೊಬ್ಬ ಉಪಕುಲಪತಿಯೂ ತಂತಮ್ಮ ಬಣ್ಣವನ್ನು ಬಯಲು ಮಾಡಿಕೊಂಡು ನಿರ್ಗಮಿಸುತ್ತಾರೆ. ದೇಜಗೌ ಜಾತಿವಾದಿ ಎನ್ನಿಸಿಕೊಂಡರೆ ಅರಸು ಭ್ರಷ್ಟಾಚಾರಿ ಎನ್ನಿಸಿಕೊಂಡರು. ಆದರೆ ಮೇಲಿನ ಇಬ್ಬರೂ ನಯವಂಚಕರಾಗಿರಲಿಲ್ಲ. ಈಗ ಹಾಲಿ ಇರುವ ಹೆಗ್ಗಡೆ ಎಂಬ ಹೆಸರಿನ ಉಪಕುಲಪತಿಯು ಜಾತಿವಾದಿಯಾಗಿದ್ದು ಭ್ರಷ್ಟಾಚಾರಿಯಾಗಿದ್ದು ಇವುಗಳೊಡನೆ ನಯವಂಚನೆಯನ್ನೂ ತನ್ನ ಕೊಡುಗೆಯಾಗಿ ಕೊಟ್ಟಿದ್ದಾನೆ.

ಇತ್ತೀಚೆಗೆ ಸಾಕಷ್ಟು ಗುಲ್ಲೆಬ್ಬಿಸಿದ್ದ ಅಂಚೆ ತೆರಪಿನ ನಿರ್ದೇಶಕ ಹುದ್ದೆಗೆ ನಡೆದ ಸಂದರ್ಶನದಲ್ಲಿ ಉಪಕುಲಪತಿ ಹೆಗ್ಗಡೆಯವರು ರಾಜ್ಯಪಾಲರಿಗೆ ಕೊಡುವುದಕ್ಕಾಗಿ ಎಂದು ಓರ್ವ ಅಭ್ಯರ್ಥಿಯಿಂದ ಲಕ್ಷಗಟ್ಟಲೆ ಹಣ ಪಡೆದಿರುವರೆಂಬ ವದಂತಿ ಮನೆ ಮಾತಾಗಿದ್ದರೂ ಉಪಕುಲಪತಿ ಹೆಗ್ಗಡೆಯವರು ಈ ಬಗ್ಗೆ ತುಟಿಪಿಟಕ್ಕೆನ್ನದಿರುವುದು ಈತನ ಭ್ರಷ್ಟಾಚಾರವನ್ನು ಧೃಡಪಡಿಸುತ್ತದೆ. **ಅಂಚೆ ತೆರಪಿನ ನಿರ್ದೇಶಕ ಹುದ್ದೆಯು** ಹರಿಜನರಿಗೆ ಮೀಸಲಾಗಬೇಕಾಗಿದ್ದುದನ್ನು ತಪ್ಪಿಸಲು ಎಲ್ಲ ಕುತಂತ್ರ ನಡೆದಿವೆ ಎನ್ನಲಾಗಿದೆ.

ಹೀಗೆ ಬಹಳ ಮುಖ್ಯ ಹುದ್ದೆಗಳು ದಲಿತರ ಪಾಲಿಗೆ ಸಿಕ್ಕುವಂತಿದ್ದರೆ ಅದನ್ನು ಜಾಹಿರಾತಲ್ಲೆ ತಪ್ಪಿಸುವುದು ಒಂದು ಕಡೆಯಾದರೆ, ಎಲ್ಲೆಲ್ಲಿ ದಲಿತರು ಇಲ್ಲವೋ ಅಲ್ಲಲ್ಲಿ ದಲಿತರಿಗೆ ಮೀಸಲಿಡುವ ಕುಲಪತಿಯು: ವಿಶ್ವವಿದ್ಯಾನಿಲಯವು ದಲಿತರಿಗೆ ವಂಚಿಸಲು ತಾನು ಕಲಿತ ವಿದ್ಯೆಯನ್ನೆಲ್ಲ ಬಳಸುತ್ತಿದೆ. ಸಂಸ್ಕೃತ ಉರ್ದು ಪ್ರೊಫೆಸರ್ ರೀಡರ್ ಹುದ್ದೆಗಳನ್ನು ದಲಿತರಿಗೆ ಮೀಸಲಿಟ್ಟು ಆ ಜಾಹೀರಾತೂ ನಗುವಂತೆ ಮಾಡಿದ್ದಾರೆ. ಇನ್ನೊಂದು ಕಡೆ ದಲಿತರು ಆಕಸ್ಮಿಕವಾಗಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಕಡೆ ಹುದ್ದೆಗಳನ್ನು ಮೀಸಲಿಡದೆ ದಲಿತರ ಸ್ಥಿತಿ ಅತಂತ್ರವಾಗಿದೆ. ಈ ಉಪಕುಲಪತಿಯ ಮೂರು ವರ್ಷದ ಆಳ್ವಿಕೆಯಲ್ಲಿ ದಲಿತರು ಶೇ. 0 ಪ್ರೊಫೆಸರ್‌ಗಳು, ಶೇ. 3 ರೀಡರ್‌ಗಳು,

(ಕೊನೆ ಪುಟಕ್ಕೆ)

ಪಂಚಮ

ಸಂಪುಟ 5: ವಿಶ್ವವಿದ್ಯಾನಿಲಯ ಸಂಚಿಕೆ : 17–18 ಬೆಲೆ : 50 ಪೈಸೆ ನವಂಬರ್ 1981

ದಲಿತ ಸಿಂಡಿಕೇಟ್ ಸದಸ್ಯರ ಸಾವಿಗೆ ಸಂತಾಪ !

ಜಾತೀಯತೆಯಿಂದ ಕೊಳೆತು ನಾರುತ್ತಿರುವ ನಮ್ಮ ವಿಶ್ವವಿದ್ಯಾನಿಲಯಗಳು ತಮ್ಮ ಹೊಟ್ಟೆಯೊಳಗೆ ದಲಿತರ ವಿರುದ್ಧ ಕ್ರೌರ್ಯ, ದಬ್ಬಾಳಿಕೆ, ಅಸಹನೆಗಳನ್ನು ತುಂಬಿಕೊಂಡು ನಿಂತಿವೆ. ಈ ಕರಾಳತೆಗಳಿಗೆಲ್ಲಾ ಚಾಲನೆ ಕೊಡುತ್ತಾ ಸಿಂಡಿಕೇಟ್, ಸೆನೆಟ್, ಅಕಾಡಮಿಕ್ ಕೌನ್ಸಿಲ್‌ಗಳಿವೆ. ದಲಿತೋದ್ಧಾರ ಹೇಳುವ ಸರ್ಕಾರ ಇಂಥವುಗಳಿಗೆ ತನ್ನ ಕಾಲು ನೆಕ್ಕುವ ದಲಿತ ನಾಯಿಗಳನ್ನು ಸದಸ್ಯರನ್ನಾಗಿ ತಂದು ಹಾಕಿ "ದಲಿತೋದ್ಧಾರ" ಮುಂದುವರೆಸಿದೆ! ಒಂದು ಉದಾ:

ಒಂಬತ್ತು ಜನ ಸದಸ್ಯರಿರುವ ಮೈಸೂರು ವಿ.ವಿ. ಸಿಂಡಿಕೇಟ್‌ನೊಳಕ್ಕೆ, ವಿ ವಿ. ದಲಿತರ ಸಂಕಟ ಹಿತಾಸಕ್ತಿಗಳ ಎಬಿಸೀಡಿಯೂ ಗೊತ್ತಿರದ ನಾಲ್ಕು ಜನ 'ದಲಿತ' ಸದಸ್ಯರನ್ನು ಸರ್ಕಾರ ತಂದು ಹಾಕಿದೆ. ದಲಿತ ವಿರೋಧಿ ಹೆಗ್ಗಡೆ ಇವರನ್ನು ತನ್ನ ಎಕ್ಕಡಗಳಂತೆ ಉಪಯೋಗಿಸಿಕೊಂಡು ದಲಿತರನ್ನು ಚೆನ್ನಾಗಿ ಒದೆಯುತ್ತಿದ್ದಾನೆ. ಮೈಸೂರು ವಿ ವಿ.ಯ ಇತಿಹಾಸದಲ್ಲೇ ನಡೆದಿರದಷ್ಟು ಅನ್ಯಾಯಗಳು, ವಂಚನೆಗಳು, ಅವಮಾನಗಳು ದಲಿತರ ಮೇಲೆ ನಡೆಯುತ್ತೊಡಗಿವೆ. ಡಾ. ಮಾಣಿಕ್ಯಂ(ವೈದ್ಯ) ಎಂಬ ಸಿಂಡಿಕೇಟ್ ಸದಸ್ಯನಿಗೆ ಒಮ್ಮೆ ದಲಿತನೊಬ್ಬ "ನನಗೆ ವಿಶ್ವವಿದ್ಯಾನಿಲಯ ಅನ್ಯಾಯ ಮಾಡಿದೆ ಸಾರ್" ಎಂದು ಹೇಳಿದರೆ ಈತ ಹೇಳುತ್ತಾನೆ: "ಆಗಲಿ ಬಿಡ್ರಿ, ಅನ್ಯಾಯವಾಗಿದ್ದರೆ **ಕೋರ್ಟಿಗೆ ಹೋಗ್ರಿ**, ನಾನಿರುವುದು ನಿಮ್ಮ ಸಮಸ್ಯೆ ಬಗೆಹರಿಸೋಕಲ್ಲ" ಬರೀ ಟಿ.ಎ. ಡಿ.ಎ ಗಳಿಗೆ ಹುಟ್ಟಿದಂತೆ ಬೆಂಗಳೂರಿಂದ ಮೈಸೂರಿಗೆ ಓಡಾಡುವ ಈತ ತಿಂಗಳಿಗೆ ಐದಾರು ಸಾವಿರದಷ್ಟು ಟಿ ಎ, ಡಿ ಎ. ಬಿಲ್ಲು ಮಾಡಿ ಗುಮಾಸ್ತರುಗಳ ಎದುರು ಹಲ್ಲುಗಿಂಜುತ್ತಾ ನಿಲ್ಲುವ ಭಂಗಿ ಮೈಸೂರು ವಿಶ್ವವಿದ್ಯಾನಿಲಯದ ತುಂಬಾ ಪ್ರಖ್ಯಾತವಾಗಿದೆ.

ನಾವು ಕಂಡ ಬತ್ತಲೆ ಕೊಲೆಗಳು

ಜಾತಿ ಭಾವನೆಯಿಂದ ಕುರುಡಾದ ಸವರ್ಣೀಯರಿಗೆ ದಲಿತರನ್ನು ಕೊಲ್ಲಲು ತೀರ ಸಣ್ಣ ನೆಪ ಸಾಕು. ಕೋರ್ಟುಗಳ ಪೋಲೀಸರ 'ಬಿಗಿ' ಬಲ್ಲ ಇವರು ಪ್ರಾಣಿಗಳಷ್ಟೇ ಸಲೀಸಾಗಿ ದಲಿತರನ್ನು ಕೊಂದು ನಿರಾತಂಕವಾಗಿ ಉಸಿರಾಡುತ್ತಾರೆ.

ಈಚೆಗೆ ಇಂಥವೇ ಎರಡು ಕೊಲೆ ನಡೆದಿವೆ.

1 ಹುಣಸೂರಿನ ಬಳಿ ಚಿಲ್ಕುಂದದಲ್ಲಿ-ಎರಡು ತುಮಕೂರಿನ ಬಳಿಯ ಅಂತರಸನಹಳ್ಳಿ ಎಂಬಲ್ಲಿ.

ಕೆಳಗಿನ ಚಿತ್ರದಲ್ಲಿ ಹೆಣವಾಗಿ ಬಿದ್ದಿರುವ ದಲಿತ ಮಹಾದೇವ ಚಿಲ್ಕುಂದದ ಅನಂತರಾಮಯ್ಯ ಎಂಬ ಬ್ರಾಹ್ಮಣ ಜಮೀನುದಾರನ ಮನೆಯಲ್ಲಿ ಜೀತಕ್ಕಿದ್ದ. ಸುಂದರವಾಗಿ ಕಟ್ಟುಮುಸ್ತಾಗಿದ್ದ ಈತ ತಮ್ಮ ಮನೆಯ ಹುಡುಗಿಯರ ಜೊತೆ ಸಂಬಂಧವಿರಿಸಿ ಕೊಂಡಿದ್ದಾನೆಂದು ಒಡೆಯನಿಗೆ ಗುಮಾನಿ ಬಂತು. ಹೇಗಾದರೂ ಮಾಡಿ ಇವನನ್ನು ತೀರಿಸಿಬಿಡ ಬೇಕೆಂದು ಹೊಂಚು ಹಾಕುತ್ತಿದ್ದ ಅನಂತರಾಮಯ್ಯ ಹಾಗೂ ಸಂಬಂಧಿಗಳು ಇದಾವುದನ್ನೂ ಅರಿಯದೆ ತೋಟದ ಕೆಲಸಕ್ಕೆ ಬಂದ ಮಹಾದೇವನನ್ನು ಹೊಡೆದು ಸಾಯಿಸಿ ಪಕ್ಕದ ಕೆರೆಗೆಸೆದಿದ್ದಾರೆ.

ಕುತಂತ್ರದ ಮಿದುಳು ಹೊಂದಿದ ಬ್ರಾಹ್ಮಣರು ಶಕ್ತಿಯುತ ರಟ್ಟೆಗಳನ್ನೂ ಬೆಳೆಸಿಕೊಳ್ಳುತ್ತಿರುವ ಸೂಚನೆಯೋ ಎಂಬಂತಿರುವ ಈ ಕೊಲೆ ನೆಡೆದಿರು

(ಕೊನೆಯ ಪುಟಕ್ಕೆ)



ಮುಂದಿನ ಸಂಚಿಕೆಯಲ್ಲಿ :

ವಿಶ್ವವಿದ್ಯಾನಿಲಯಗಳ ಕಾಮ ಪಿಶಾಚಿಗಳು

ಶಿಕ್ಷಕರು

ಪರಿಶಿಷ್ಟ ಜಾತಿ| ಜನಾಂಗದವರು ಭರ್ತಿಯಾಗಿರುವ ಹುದ್ದೆಗಳು

ವಿಭಾಗಗಳು	ಮಾನಸಗಂಗೋತ್ರಿ	ಸ್ನಾತಕಪೂರ್ವ	ಅಂಚೆ & ತೆರಪಿನ ಶಿಕ್ಷಣ ಸಂಸ್ಥೆ
1) ಮಾನವ ಶಾಸ್ತ್ರ	೧, ಅಧ್ಯಾಪಕ(ತಾ)	—	—
2) ಜೀವ ಶಾಸ್ತ್ರ	೨, ಅಧ್ಯಾಪಕರು	೧, ಅಧ್ಯಾಪಕರು(ತಾ)	—
3) ರಸಾಯನ ಶಾಸ್ತ್ರ	೧, ರೀಡರ್	೨, ಅಧ್ಯಾಪಕರು	—
4) ಅರ್ಥ ಶಾಸ್ತ್ರ	೩, ಅಧ್ಯಾಪಕರು (ತಾ)	೨, ಅಧ್ಯಾಪಕರು(೧, ತಾ)	೧, ಅಧ್ಯಾಪಕರು(ತಾ)
5) ಭೂಗೋಳ ಶಾಸ್ತ್ರ	೧, ಅಧ್ಯಾಪಕ(ತಾ)	—	—
6) ಇತಿಹಾಸ	೧, ಅಧ್ಯಾಪಕ	೧, ಅಧ್ಯಾಪಕರು(ತಾ)	೧, ರೀಡರ್
7) ಐ ಡಿ. ಎಸ್.	೧, ಅಧ್ಯಾಪಕ	—	—
8) ಪತ್ರಿಕೋದ್ಯಮ	—	—	—
9) ಕನ್ನಡ	—	೧, ಅಧ್ಯಾಪಕ	೧, ಅಧ್ಯಾಪಕ
10) ತತ್ವ ತಾಸ್ತ್ರ	—	೧, "	—
11) ರಾಜ್ಯಶಾಸ್ತ್ರ	೧, ಅಧ್ಯಾಪಕ	೧, "	—
12) ಸಮಾಜಶಾಸ್ತ್ರ	೧, ಪ್ರಾಧ್ಯಾಪಕ	೨, "	೧, ಅಧ್ಯಾಪಕ(ತಾ)
	೧, ಅಧ್ಯಾಪಕ(ತಾ)	"	—
13) ಪ್ರಾಚ್ಯ ಮತ್ತು ಇತಿಹಾಸ	—	೧, "	—
14) ಲಲಿತಕಲಾ ಕಾಲೇಜು	೧, ರೀಡರ್		—
15) ಇಂಗ್ಲೀಷ್	೧, ರೀಡರ್	—	—

ಸೂಚನೆ : ತಾ—ತಾತ್ಕಾಲಿಕ

ಹುದ್ದೆಯ ಮುಂದೆ ಖಾಲಿ ಇದ್ದರೆ ಖಾಯಂ ಎಂದು ಅರ್ಥ ಮಾಡಿಕೊಳ್ಳಬೇಕು.

ಸ್ನಾತಕಪೂರ್ವ : ಮಹಾರಾಜ ಕಾಲೇಜು, ಯುವರಾಜ ಕಾಲೇಜು ಮತ್ತು ಸಂಜೆ ಕಾಲೇಜುಗಳು ಸೇರುತ್ತವೆ.

i) ವಿಶ್ವವಿದ್ಯಾನಿಲಯದ ಒಟ್ಟು ಅಧ್ಯಾಪಕರ ಸಂಖ್ಯೆ —400
ಖಾಯಂ ಮತ್ತು ಹಂಗಾಮಿಯಾಗಿ
ಕೆಲಸ ಮಾಡುತ್ತಿರುವ ಎಸ್ ಸಿ., ಎಸ್ ಟಿ., ಅಧ್ಯಾಪಕರು—27

(ii) ವಿ.ವಿ. ಒಟ್ಟು ರೀಡರ್ ಸಂಖ್ಯೆ —150
ಕೆಲಸ ಮಾಡುತ್ತಿರುವ ಎಸ್ ಸಿ.. ಎಸ್ ಟಿ. ರೀಡರ್ ಗಳು—3

(iii) ವಿಶ್ವವಿದ್ಯಾನಿಲಯದ ಒಟ್ಟು ಪ್ರಾಧ್ಯಾಪಕರ ಹುದ್ದೆಗಳು—100
ಕೆಲಸ ಮಾಡುತ್ತಿರುವ ಎಸ್.ಸಿ., ಎಸ್.ಟಿ. ಪ್ರಾಧ್ಯಾಪಕರು—1

ಇಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇರುವ ಶಿಕ್ಷಕರು ಹಾಗೂ ಶಿಕ್ಷಕೇತರರ ಒಟ್ಟೂ ಸಂಖ್ಯೆಯೊಂದಿಗೆ ಹಾಲಿ ಭರ್ತಿಯಾಗಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದವರ ಅಂಕಿ ಅಂಶಗಳ ನೋಟವಿದೆ.

ಶಿಕ್ಷಕೇತರರು

ಹುದ್ದೆಗಳು	ಸಂಖ್ಯೆ	ಪ.ಜಾ. ಪ.ಜನಾಂ
1. ಡೆಪ್ಯುಟಿ ರಿಜಿಸ್ಟ್ರಾರ್ಸ್	3	—
2. ಡೆಪ್ಯುಟಿ ಕಂಟ್ರೋಲರ್ಸ್ ಆಫ್ ಎಕ್ಸಾಮಿನೇಷನ್ಸ್	3	—
3. ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್	9	1
4. ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ಸ್	2	—
5. ಸೂಪರಿಂಟೆಂಡೆಂಟ್ಸ್	27	3
6. ಸೀನಿಯರ್ ಅಸಿಸ್ಟೆಂಟ್ಸ್	25	1
7. ಸ್ಟೆನೋಗ್ರಾಫರ್ಸ್	37	1
8. 1ನೇ ದರ್ಜೆ ಗುಮಾಸ್ತರು	87	3
9. 2ನೇ ದರ್ಜೆ ಗುಮಾಸ್ತರು	174	15
10. ಟೈಪಿಸ್ಟ್ ಕಂ ಕ್ಲರ್ಕ್ಸ್	75(ಅಂದಾಜು)	1
11. ಅಟೆಂಡರ್ಸ್	(ಸಿಕ್ಕಿಲ್ಲ)	11
12. 4ನೇ ದರ್ಜೆ ನೌಕರರು	(ಸಿಕ್ಕಿಲ್ಲ)	48

ನುಂಗಿದ್ದಕ್ಕಲ್ಲ ನೂರೆಂಟು ಏಟು

೧೯೭೩ರ ಒಂದು ದಿನ ಬೆಂಗಳೂರು ಸೆಂಟ್ರಲ್ ಕಾಲೇಜು ಹಾಸ್ಟೆಲ್‌ನಲ್ಲಿದ್ದೆ. ಸುಮಾರು ಸಂಜೆ ೮ಗಂಟೆ ಸಮಯ. ಮಹಡಿಯ ಮೇಲಿಂದ ನನಗೆ "ಹೊಡಿರೋ ಸೂಳೆ ಮಗನ್ನ ...ಕಟ್ರೊ ಕಂಬಕ್ಕೆ ..ಇವರಪ್ಪನಮನೇದೆ ದುಡ್ಡು"ಎಂಬ ಸದ್ದು ಕೇಳುತ್ತಿತ್ತು. ರೂಮಿನಲ್ಲಿದ್ದ ವಿದ್ಯಾರ್ಥಿಗಳು ಸದ್ದನ್ನು ಹಿಂಬಾಲಿಸಿ ಕೆಳಕ್ಕೆ ಓಡಿದರು. ನಾನೂ ಓಡಿದೆ. ಆಗಾಗಲೆ ಗಲಾಟೆ ಹೆಚ್ಚಾಗಿ ಹುಡುಗರು ಗುಂಪಾಗಿದ್ದರು. ಯಾರೋ ಒಬ್ಬನನ್ನು ಗುದ್ದಿ... ಹೊಡೆಯುತ್ತಾ, ಅನಾಮತ್ತಾಗಿ ಮೇಲೆ ಎತ್ತಿಕೊಂಡು ಕಂಬದ ಬಳಿ ನಿಲ್ಲಿಸಿದರು. ಮತ್ತೊಬ್ಬ ಓಡಿ ಹೋಗಿ ಸೇದೋ ಹಗ್ಗ ತಂದ. ಅನೇಕರು ಆ ವ್ಯಕ್ತಿಯನ್ನು ಕಂಬಕ್ಕೆ ಸೇರಿಸಿ ಬಿಗಿದರು. ಆ ವ್ಯಕ್ತಿ ಬಿಡಿಸಿಕೊಳ್ಳಲಾಗದೆ ಒದ್ದಾಡುತ್ತಿದ್ದ. ಕಣ್ಣಿನಲ್ಲಿ ನೀರು ಸುರಿಸಿ '...ಹಗ್ಗ ಬಿಚ್ಚಿ'... ಎಂದು ವಿನಯದಿಂದ ಕೇಳುತ್ತಿದ್ದ. ಆ ವ್ಯಕ್ತಿ ಯಾರೆಂದು ತಿಳಿದುಕೊಳ್ಳಲು ಒದ್ದಾಡಿದೆ. ಗುಂಪು ಇದ್ದುದರಿಂದ ಸ್ವಲ್ಪ ತೊಂದರೆಯಾಯಿತು.

"ಸೆಡ್ಯೂಲ್ಡ್ ಕ್ಯಾಸ್ಟ್ ಸೂಳೆ ಮಕ್ಳು.... ಸ್ಕಾಲರ್‌ಷಿಪ್ ಬರ್ತದೆ.... ಎಷ್ಟ್ ಮೆಸ್‌ಬಿಲ್ ಬಂದ್ರು ಕಟ್ತಾರೆ.... ನಾವೇನ್ ಮಾಡೋಣ...." ಎಂದು ಸಾಹಸ ನೆಡಸಿದವನಂತೆ ಓರ್ವ ಲಿಂಗಾಯತರ ವಿದ್ಯಾರ್ಥಿ ಪಕ್ಕದವನಿಗೆ ಹೇಳುತ್ತಿದ್ದ.

ಆಗ ಆ ವ್ಯಕ್ತಿ ದಲಿತ ಇಂಜಿನಿಯರ್ ವಿದ್ಯಾರ್ಥಿ, ಆ ತಿಂಗಳಿನ ಮೆಸ್ ಸೆಕ್ರೆಟರಿಯಾಗಿದ್ದವನೆಂದು ತಿಳಿಯಿತು. ಪ್ರತಿ ತಿಂಗಳೂ ಸವರ್ಣೀಯ ವಿದ್ಯಾರ್ಥಿಗಳೇ ಮೆಸ್ ಸೆಕ್ರೆಟರಿಗಳಾಗಿ ಸಾಕಷ್ಟು ಹಣ ಲಪಟಾಯಿಸುತ್ತಿದ್ದರು. ಆದರೆ ಒಂದು ಭಾರಿ ಮಾತ್ರ ದಲಿತನೊಬ್ಬ ಮೆಸ್ ಸೆಕ್ರೆಟರಿ ಆಗಿದ್ದ. ಸವರ್ಣೀಯರು ಎಷ್ಟು ಮೆಸ್ ಬಿಲ್ ತಂದರೂ ಯಾರೂ ಕೇಳುತ್ತಿರಲಿಲ್ಲ. ಆದರೆ ಆ ಸಾರಿ ಮೆಸ್ ಬಿಲ್ ಹೆಚ್ಚಾಗಿ ಬಂದಿದೆ ಎಂಬ ಕಾರಣಕ್ಕಾಗಿ ಈ ಸಾಮೂಹಿಕ ಅವಮಾನ ಬಹಿರಂಗವಾಗಿ ನಡೆಯಿತು.

—ಬಾನಂದೂರು ಕೆಂಪಯ್ಯ

ಂಗಳೂರು ವಿ.ವಿ.ಯಲ್ಲಿ ನರಳುತ್ತಿರುವ ದಲಿತರು

ಂಗಳೂರು ವಿಶ್ವವಿದ್ಯಾನಿಲಯ ಜಾತೀಯ ಪ್ರಮುಖ ಕ್ಷೇತ್ರಗಳಲ್ಲೊಂದು. ಇಲ್ಲಿನ ಾಸ್ತ್ರ ವಿಭಾಗ ಪಕ್ಷಪಾತಕ್ಕೆ, ದಲಿತ ವಿರೋ ುವಟಿಕೆಗಳಿಗೆ ಪ್ರಮುಖ ಪಾತ್ರ ಹೊಂದಿ ವಿಭಾಗದ ಮುಖ್ಯಸ್ಥನಾಗಲಿಕ್ಕೆ ಅಗತ್ಯ ಬೇಕಿದ್ದ ಪಿ. ಹೆಚ್. ಡಿ. ಅಥವಾ ತತ್ವ ಪ್ರಕಟಣೆಗಳಾವುವೂ ಇಲ್ಲದೆ ಈ ವಿಭಾ ಮುಖ್ಯಸ್ಥನಾಗಿ ಆಯ್ಕೆಗೊಂಡ ಶ್ರೀನಿ ರಾವ್ ಎಂಬ ಗೋಮುಖ ವ್ಯಾಘ್ರನ ಕೈಗೆ ನರಳುತ್ತಿರುವ ಇಲ್ಲಿನ ದಲಿತ ಅಧ್ಯಾಪಕರ, ರ್ಥಿಗಳ ಸ್ಥಿತಿ ಶೋಚನೀಯವಾಗಿದೆ.

ಲಿತರಿಗೆ ಸರ್ಕಾರ ಕೊಡುತ್ತಿರುವ ಉಚಿತ ಭ್ಯಗಳನ್ನು ಕಂಡು ಸಹಿಸದ ಈತ "ತತ್ವ ದ ಗಂಧವೇ ಇಲ್ಲದ ಈ ಜನಕ್ಕೇಕೆ ಹಾಸ್ಟೆ ಲೈಬ್ರರಿ ಸೌಲಭ್ಯಗಳನ್ನು ಕೊಡಬೇಕು. ಬದಲು ಬೇರೆಯವರಿಗೆ ಕೊಟ್ಟಿದ್ದರೆ ದೇಶ ದುವರಿಯುತ್ತಿತ್ತು'' ಎಂದು ಬಹಿರಂಗ ಯೇ ತರಗತಿಗಳಲ್ಲಿ ಟೀಕಿಸುತ್ತಾನೆ. ತತ್ವ ಪ್ರವೇಶ ಪಡೆದ ದಲಿತ ವಿದ್ಯಾರ್ಥಿಗಳಿಗೆ ಯ ತುಂಬಾ ಕಷ್ಟ, ನಿಮಗೆ ಪದವಿ ಬೇಕಿ ಬೇರೆ ವಿಭಾಗಗಳಿಗೆ ಸೇರುವುದು ಸೂಕ್ತ'' ಹೆದರಿಸಿ ತತ್ವಕ್ಕೇ ಹುಟ್ಟಿದವನಂತೆ ವರ್ತಿ ್ತನೆ. ಅಂತೂ ಧೈರ್ಯ ಮಾಡಿ ಸೇರಿದ ್ಯರ್ಥಿಗಳಲ್ಲಿ ಕೆಲವರನ್ನು ಫೇಲು ಮಾಡುವು ಮೂಲಕವಾದರೂ ತನ್ನ ಬೇಳೆ ಬೇಯಿಸಿ ಕೊಂಡ ಉದಾ : ಇವೆ. 1977-78ರ ಸಾಲಿನಲ್ಲಿ ಶಾಂತ ಎಂಬ ದಲಿತ ವಿದ್ಯಾರ್ಥಿನಿ ಸಂಶೋಧನಾ ಸಹಾಯಕಿಯಾಗಿ ಆಯ್ಕೆಯಾಗಬೇಕಿದ್ದನ್ನು ಪ್ಪಿಸಿ ವಿ. ವಿ. ದ ಕಾನೂನನ್ನು ಮೀರಿ 30 ವರ್ಷಕ್ಕೂ ಹೆಚ್ಚು ವಯಸ್ಸಾದ ಕೃಷ್ಣಮೂರ್ತಿ ಎಂಬ ಬ್ರಾಹ್ಮಣ ಅಭ್ಯರ್ಥಿ ಯೊಬ್ಬನನ್ನು ನೇಮಿಸಿಕೊಂಡ. ದಲಿತ ವಿದ್ಯಾರ್ಥಿಗಳಿಗಾಗಿಯೇ ತೆರೆಯಬೇಕಿದ್ದ ಎಸ್. ಸಿ. ಎಸ್. ಟಿ. ಬುಕ್ ಬ್ಯಾಂಕನ್ನು ಉದ್ದೇಶಪೂರ್ವಕವಾಗಿಯೇ ತಡೆಹಿಡಿದಿರುವ ಈತ ದಲಿತರನ್ನು ತುಳಿಯಲು ಏನೆಲ್ಲಾ ಮಾಡಲೂ ಹಿಂಜರಿಯುವವನಲ್ಲ.

—ಎಸ್. ವೆಂಕಟೇಶ್.

ವಿದ್ಯಾರ್ಥಿಗಳಷ್ಟೇ ಅಲ್ಲದೆ ಅಧ್ಯಾಪಕರುಗಳನ್ನೂ ನಾನಾ ಬಗೆಯಲ್ಲಿ ಮಾನಸಿಕವಾಗಿ ಹಿಂಸಿಸುವ ಈತ ಇಲ್ಲಿನ ದಲಿತ ಅಧ್ಯಾಪಕ ಬಿ.ಪಿ. ಸಿದ್ಧಾಶ್ರಮರಿಗೆ ಕೊಡುತ್ತಿರುವ ಕಿರುಕುಳವಂಥೂ ಸಹಿಸಿಕೊಳ್ಳಲಾಗದಂಥದ್ದು. ಈತ ಟಾಯ್‌ಲೆಟ್‌ಗೆ ಹೋಗಬೇಕಾದರೂ ಮುಖ್ಯಸ್ಥನ ಅಪ್ಪಣೆ ಪಡೆಯಬೇಕು. ಸಿದ್ಧಾಶ್ರಮ ಟೀಚರ್ ಫೆಲೋಶಿಪ್‌ನಲ್ಲಿರುವಾಗ ಗೈಡ್ Maintain ಮಾಡಿದ ಹಾಜರಾತಿಯನ್ನು Forward ಮಾಡದೆ ಬೇಕಂತಲೇ ತಡೆ ಹಿಡಿದು ಸಂಬಳ ಬಹಳ ತಡವಾಗಿ ಸಿಗುವಂತೆ ಮಾಡಿದ ಈ ಶ್ರೀನಿವಾಸರಾಯ ಸಿದ್ಧಾಶ್ರಮರ Teacher Fellowship ಅವಧಿ ಮುಗಿದ ಮೇಲೆ ಅವರ Duty Report ಕೂಡ ಒಪ್ಪಿಕೊಳ್ಳದೆ ಬಹಳಷ್ಟು ದಿನ ಸತಾಯಿಸಿ "ಸಿದ್ಧಾಶ್ರಮ ನಿಮಗೆ ನಿಗಧಿಪಡಿಸಿದ ಅಧ್ಯಾಪಕನಲ್ಲ"ವೆಂದು ತರಗತಿಗಳಲ್ಲಿ ಅವರಿಗೆ ಅವಮಾನ ಮಾಡುವುದರ ಜೊತೆಗೆ ಇವರ ವಿರುದ್ಧ ಕೆಲವು ಬ್ರಾಹ್ಮಣ ವಿದ್ಯಾರ್ಥಿಗಳಿಂದ **ರಿಪೋರ್ಟ್** ಬರೆಸಿಕೊಳ್ಳುವುದು, ಅನಾವಶ್ಯಕವಾಗಿ Memo ಕೊಡುವುದು ಇತ್ಯಾದಿ ಮಾಡುತ್ತಿದ್ದಾನೆ.

(15ನೇ ಪುಟ ನೋಡಿ)

ಕೆಳಗಿನ ಅಂಕಿ ಅಂಶವು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯ ಮೇಲ್ವರ್ಗದ ಶಿಕ್ಷಕರ ಹಾಗೂ ಶಿಕ್ಷಕೇತರರ ಸಂಖ್ಯೆಯೊಂದಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ನೌಕರರ ಸಂಖ್ಯೆಯನ್ನು ತೋರಿಸುತ್ತದೆ.

ಶಿಕ್ಷಕರು	ಪ.ಜಾತಿ/ಜನಾಂಗ	ಮೇಲ್ವರ್ಗದವರು	ಒಟ್ಟು
ಪ್ರಾಧ್ಯಾಪಕರು	1	54	55
ಹಂಗಾಮಿ ಪ್ರಾಧ್ಯಾಪಕರು	1	14	15
ರೀಡರ್‌ಗಳು	—	79	79
ಅಧ್ಯಾಪಕರು	4	247	251
ಸಂಶೋಧನಾ ಸಹಾಯಕರು	1	57	58
ಶಿಕ್ಷಕೇತರರು			
ಸೂಪರಿಂಟೆಂಡೆಂಟ್	1	27	28
ಮೊದಲನೆ ದರ್ಜೆ ಗುಮಾಸ್ತರು	6	82	88
ಎರಡನೆ ದರ್ಜೆ ಗುಮಾಸ್ತರು	8	97	105
ನಾಲ್ಕನೆ ದರ್ಜೆ ನೌಕರರು			
ಅಟೆಂಡರ್‌ಗಳು	5	125	130
ಸಹಾಯಕರು	2	34	36
ಜವಾನರುಗಳು	17	150	167
ಸ್ವೀಪರ್‌ಗಳು	2	21	23
ಭಂಗಿಗಳು	6	—	6
ಒಟ್ಟು	54	987	1041

ಭದ್ರಾ ಸ್ನಾತಕೋತ್ತರ ಕೇಂದ್ರ ಮೈಸೂರು ದಣಿಗಳ ಸ್ವರೂಪ

ನಾನು ಮೈಸೂರು ವಿಶ್ವವಿದ್ಯಾಲಯದ ಅಂಗೀಕಾರಕ್ಕೆ ಒಳಗಾಗಿರುವ ಭದ್ರಾಪ್ರಾಜೆಕ್ಟಿನ ಸ್ನಾತಕೋತ್ತರ ಕೇಂದ್ರದಲ್ಲಿನ ದಲಿತರ ಸಮಸ್ಯೆಗಳನ್ನು ಕುರಿತು ಬರೆಯಲು ಯೋಚಿಸಿದೆ. ಯೋಚಿಸುತ್ತಾ ಹೋದಂತೆ ಇಡೀ ಕೇಂದ್ರವೇ ಈಗ ದಲಿತರ ಸ್ಥಿತಿಯಲ್ಲಿರುವುದರಿಂದ, ಬಲಿತವರಿಂದ ಆಗಬಹುದಾಗಿದ್ದ ತೊಂದರೆ ಇಲ್ಲಿ ಆಗುತ್ತಿಲ್ಲ ಮತ್ತು ಇಲ್ಲಿನ ಯಾವ ಹುದ್ದೆಯನ್ನೂ ಇಲ್ಲಿನ ಪ್ರಾಧ್ಯಾಪಕರುಗಳು ಮಾಡುವ ವ್ಯವಸ್ಥೆ ಇಲ್ಲದಿರುವುದರಿಂದ, ತುಂಬಾ ಪರೀಕ್ಷೆಯ ಸಮಯಗಳು ಬಾರದೆ ಯಾರು ಹೇಗೆ ಎಂಬುದನ್ನು ಹೇಳಲೂ ಬರುವುದಿಲ್ಲ. ಆದರೆ ಮೈಸೂರಿನ ದಣಿಗಳು ಮಾಡಿದ ಅಪಾಯಿಂಟ್‌ಮೆಂಟ್‌ಗಳ ಸ್ವರೂಪವನ್ನು ಮಾತ್ರ ತಿಳಿಸಬಹುದಾಗಿದೆ.

ಈ ಕೇಂದ್ರವು ೧೯೭೩-೭೪ ರಲ್ಲಿ ನಾಲ್ಕು ಶಾಖೆಗಳೊಡನೆ ಪ್ರಾರಂಭವಾಗಿ, ಅನೇಕ ಅಧ್ಯಾಪಕರು ಬಂದು-ಹೋಗಿ ಈಗ ಹಾಲಿ ೧೬ ಜನರಿದ್ದು, ಅರ್ಥಶಾಸ್ತ್ರ ವಿಭಾಗದಲ್ಲಿ ಮಾತ್ರ ಒಬ್ಬ ದಲಿತ ಅಧ್ಯಾಪಕನಿದ್ದು ಉಳಿದ ಯಾವ ಶಾಖೆಯಲ್ಲೂ ದಲಿತರಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ಒಟ್ಟು ನಾಲ್ಕೂ ಶಾಖೆಗಳು ಸೇರಿ ೧೩೩ ರಿದ್ದರೂ ಕನ್ನಡ ಮತ್ತು ಅರ್ಥಶಾಸ್ತ್ರಶಾಖೆಗಳ ಒಟ್ಟು ದಲಿತ ವಿದ್ಯಾರ್ಥಿಗಳು ೧೫ ವಿದ್ಯಾರ್ಥಿಗಳು ಮಾತ್ರ ಇದ್ದಾರೆ. ರಸಾಯನ ಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ ಸೀಟುಗಳನ್ನು ಬೇಡುವ ದಲಿತ ವಿದ್ಯಾರ್ಥಿಗಳೇ ಇಲ್ಲವಾಗಿದೆ.

ಒಟ್ಟಾರೆ, ಈ ಕೇಂದ್ರವನ್ನು ಒಂದು ರೀತಿಯಲ್ಲಿ ಮೈಸೂರಿನಲ್ಲಿ ಬೇಡವಾದವರನ್ನು ಇಲ್ಲಿಗೆ ದಬ್ಬಲು ಇಟ್ಟುಕೊಂಡಿರುವ ಸಾಧನವಾಗಿರುವುದರಿಂದ, ಇಲ್ಲಿ ಯಾವುದಕ್ಕೂ ಜಗಳವಾಗಲೀ, ವೈಷಮ್ಯವಾಗಲೀ ತೀವ್ರಮಟ್ಟದಲ್ಲಿ ನಡೆದಿಲ್ಲ.

—ರುದ್ರಪ್ಪ ಹನಗವಾಡಿ

ಜಾತಿ ಕೋಟೆಗಳ ಮೈಸೂರು ವಿಶ್ವವಿದ್ಯಾನಿಲಯ :

ಮೈಸೂರು ವಿಶ್ವವಿದ್ಯಾನಿಲಯದ ವಿಭಾಗಗಳೆಂದರೆ ಅವು ಒಂದೊಂದು ಕೋಟೆ, ಪ್ರತಿಯೊಂದೂ ಪಾಳೆಗಾರಿಕೆಯ ತುಂಡುಗ
ಎಂಬ ಪ್ರತೀತಿ ಇದೆ. ಇಂಥ ಕೆಲವು ಕೋಟೆ ಬಾಗಿಲುಗಳನ್ನು ಶ್ರೀರಂಜಾನ ದರ್ಗಾ ಮತ್ತು ಶ್ರೀ ಮರಿಸ್ವಾಮಿಯವರು ತ
ದಲಿತರ ಬಗ್ಗೆ ಕೇಳಿಸಿಕೊಂಡಿದ್ದನ್ನು ನಮ್ಮ ಓದುಗರ ಮುಂದಿಡುತ್ತಿದ್ದೇವೆ.

ಸಂದರ್ಶನಕಾರರು ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ಸಾಮಾನ್ಯವಾದ ಎರಡು ಪ್ರಶ್ನೆ ಕೇಳಿದರು. ಮೊದಲನೆಯದು : ಸೆನೆಟ್ ಸದಸ್ಯ ಶ್ರೀ ವಿ. ಎಚ್. ಗೌಡರು 'ಶೇಕಡ ಹದಿನೆಂಟು ಭರ್ತಿಯಾಗುವವರೆಗೂ ಎಲ್ಲಾ ಉದ್ಯೋಗವೂ ದಲಿತರಿಗೆ ಮೀಸಲಾಗಬೇಕೆಂದು, ನಿರ್ಣಯ ಮಂಡಿಸಿ ಅದು ಸೆನೆಟ್‌ನಲ್ಲಿ ಒಪ್ಪಿತವಾದ ಬಗ್ಗೆ ಶ್ರೀ ಮಲ್ಲದೇವರು ನಿರ್ಣಯ ಸ್ವಾಗತಿಸಿದರು. ಶ್ರೀ ಹಾ.ಮಾ. ನಾಯಕರು ನಿರ್ಣಯದ ಆಶಯ ಒಪ್ಪಿದರೂ ಈ ನಿರ್ಣಯ ರಾಜ್ಯಾಂಗ ವಿರೋಧಿ ಎಂದರು ಶ್ರೀ ಇರಾನಿಯವರು ನಿರ್ಣಯ ಆದರ್ಶವಾದರೂ ಆಡಳಿತಕ್ಕೆ ಅಡೆತಡೆಯಾಗುವುದೆಂದರೆ ಶ್ರೀ ದೇವರಾಜ ಸರ್ಕಾರ್‌ರು ಈ ನಿರ್ಣಯ ಕಾಲೇಜುಗಳಿಗೆ ಅನ್ವಯಿಸ ಬಹುದಾದರೂ ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನದಲ್ಲಿ ತೊಂದರೆ ಉಂಟಾಗಬಹುದೆಂದರು. ಶ್ರೀ ಕೃಷ್ಣ ಮೂರ್ತಿಯವರೂ ನಿರ್ಣಯವು ಕಾರ್ಯರೂಪಕ್ಕೆ ತರುವಷ್ಟು ಸರಳವಾಗಿಲ್ಲವೆಂದರು. ಮುಂದೆ ಶ್ರೀ ಸಂಜೀವ ಯ್ಯನವರು ಏನೇ ಹೇಳಿದರೂ ರಾಜಕೀಯವಾಗುವುದರಿಂದ ತಾವೇನೂ ಹೇಳುವುದಿಲ್ಲವೆಂದು ತಿಳಿಸಿದರು.

ಎರಡನೇ ಪ್ರಶ್ನೆ : ಉದ್ಯೋಗ ನೀಡುವಲ್ಲಿ ಅನುಸರಿಸುವ ಸರದಿ (ರೋಸ್ಟರ್) ವ್ಯವಸ್ಥೆ ಬಗ್ಗೆ. ಈ ವಿಪರ್ಯಾಸ ವ್ಯವಸ್ಥೆಯಲ್ಲಿ ದಲಿತರಿಲ್ಲದ ಕಡೆ ದಲಿತರಿಗೆ ಮೀಸಲಿಟ್ಟು, ದಲಿತರು ಹಂಗಾಮಿ ಕೆಲಸ ಮಾಡುತ್ತಿರುವ ಕಡೆಯೂ ಮೀಸಲಿಡದೆ ಒಟ್ಟಿನಲ್ಲಿ 'ದಲಿತರಿಗೆ ಜಾಹಿರಾತು ಹೈ ಉದ್ಯೋಗ ನೈ' ಎಂಬಂತೆ ಕುರುಡಾಗಿ ನಡೆದಿದೆ. ಈ ಬಗ್ಗೆ ಶ್ರೀ ನಾಗರಾಜ ಶ್ರೀ ಜಯರಾಮಯ್ಯನವರು ಈ ಸರದಿ ವ್ಯವಸ್ಥೆಯಿಂದ ದಲಿತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗಿದೆ ಅಂದರೆ ಶ್ರೀ ದೇವರಾಜ ಸರ್ಕಾರರು ಈ ಪದ್ಧತಿ ದಲಿತರಿಗೆ ಫಲಕಾರಿಯಾಗದು ಎಂದರು. ಶ್ರೀ ಹಾ.ಮಾ.ನಾಯಕರು ಈಉದ್ಯೋಗಪದ್ಧತಿ ಸಂದಿಗ್ಧವಾಗಿದೆ.ಬೇರೊಂದು ಹೊಳೆಯುತ್ತಿಲ್ಲ' ಎಂದರೆ ಶ್ರೀ ರಾಜೇಶ್ವರಯ್ಯನವರು 'ಒಟ್ಟಾರೆ ತೆಗೆದುಕೊಂಡು ಮೀಸಲಾತಿ ಭರ್ತಿ ಮಾಡ ಬೇಕೆಂದು ಸಲಹೆ ಮಾಡಿದರು. ಶ್ರೀ ಕೃಷ್ಣಮೂರ್ತಿಯವರು ಈ ಪದ್ಧತಿ ಬಗ್ಗೆ ಅಷ್ಟಾಗಿ ತಿಳಿಯದೆಂದರು. ಈಗ ವಿಭಾಗದ ಮುಖ್ಯಸ್ಥರು ದಲಿತರ ಬಗ್ಗೆ ತಳೆದಿರುವ ಧೋರಣೆ ಮುಂದಿವೆ. ಈ ಯಾವ ವಿಭಾಗದಲ್ಲು (ಭೂಗೋಳ ಬಿಟ್ಟು) ಒಬ್ಬನೇ ಒಬ್ಬ ದಲಿತ ಅಧ್ಯಾಪಕನೂ ಇಲ್ಲ.

ಮೊದಲು ಒಂದಿಷ್ಟು ಭಯ

ಭೂಗೋಳ ಜಯರಾಮಯ್ಯನವರ

ನಮ್ಮಲ್ಲಿ ಅನೇಕ ಜನ ದಲಿತ ವಿದ್ಯಾರ್ಥಿಗ
ತೃಪ್ತಿಕರವಾದ ಅಂಕಗಳನ್ನು ತೆಗೆದುಕೊಂ
ಪಾಸಾಗಿದ್ದಾರೆ. ಮೊದ ಮೊದಲು ಅವ
ಒಂದಿಷ್ಟು ಭಯವೆನಿಸಿದರೂ ಕೊನೆಯ ವ
ದಲ್ಲಿ ಹೆಚ್ಚು ಆತ್ಮವಿಶ್ವಾಸವುಳ್ಳವರಾಗಿ
ತ್ತಾರೆ.

ಕುಂತಿ ಮಕ್ಕಳಿಗೆ ರಾಜ್ಯವಿ

ಹಿಂದಿ ರಾಜೇಶ್ವರಯ್ಯನವ

ಹಿಂದಿಗೆ ಕೆಲವೇ ದಲಿತ ವಿದ್ಯಾರ್ಥಿಗ
ಮಾತ್ರ ಬರುತ್ತಿದ್ದು ಅವರು ಯಾವ ರೀತಿಯ
ದಲೂ ಹಿಂದುಳಿದಿಲ್ಲ. ಆದರೆ ಯುಗಯುಗಗಳಿ
ಈ ಸಮಾಜ ಅವರಿಗೆ ಅವಕಾಶ ಕೊಟ್ಟ
ದಲಿತ ಅಭ್ಯರ್ಥಿಗಳು ಅಧ್ಯಾಪಕ ಹುದ್ದೆಗೆ ಪ್ರ
ಶತ 50 ರಷ್ಟು ಗಳಿಸಿದರೆ ಸಾಕು. ವಿಶ್ವವಿದ
ನಿಲಯವು ಮೀಸಲಾತಿ ಸ್ಥಾನವನ್ನು ತುಂ
ಇರುವುದಕ್ಕೆ ಕಾರಣವೇನು? ದಲಿತರಲ್ಲಿ ವಿದ
ಭ್ಯಾಸ ಮಟ್ಟವಿಲ್ಲವೆಂದು ಅರ್ಥವೆ? ಅಂ
ಇಂತು ಕುಂತಿಮಕ್ಕಳಿಗೆ ರಾಜ್ಯವಿಲ್ಲ ಎಂಬ ಗ
ಯಂತೆ ಎಲ್ಲವೂ ನಡೆಯುತ್ತಿದೆ.

ಜಾಣ-ದಡ್ಡ ಎಂಬುದಿಲ್ಲ

ಸಂಸ್ಕೃತ ಹೆಚ್.ಪಿ. ಮಲ್ಲದೇವರು

ದಲಿತ ವಿದ್ಯಾರ್ಥಿಗಳು ಸಂಸ್ಕೃತ ಓದುವಾಗ ಸವರ್ಣೀಯರಿಗಿಂತ ವಿಶೇಷವಾಗಿ ಭಿನ್ನವಾಗೇನು ಇರುವುದಿಲ್ಲ. ಆದರೆ ಸಂಸ್ಕೃತಕ್ಕೆ ದಲಿತರು ಬರುವುದೇ ಕಡಿಮೆ. ಅವರಿಗೆ ಕೀಳರಿಮೆ ಇರಬಹುದು. ಅಂಥ ಕೀಳರಿಮೆ ಹಳ್ಳಿಗಳಿಂದ ಕಲಿಯಲು ಬರುವ ಅನೇಕ ಸವರ್ಣೀಯ ವಿದ್ಯಾರ್ಥಿಗಳಲ್ಲೂ ಇರುತ್ತದೆ. ಹೀಗಾಗಿ ಪರಿಸರದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ವ್ಯತ್ಯಾಸ ಕಂಡು ಬರುವುದು. ಆದರೆ ಜಾಣತನ ಇಲ್ಲವೆ ದಡ್ಡತನವೆಂಬುದು ಇಲ್ಲವೇ ಇಲ್ಲ. ಹಾಗೆ ನೋಡಿದರೆ ಬ್ರಾಹ್ಮಣೇತರ ವಿದ್ಯಾರ್ಥಿಗಳೇ ಸಂಸ್ಕೃತದಲ್ಲಿ ಹೆಚ್ಚು ಅಂಕಗಳಿಸಿರುವ ಸಂದರ್ಭಗಳಿವೆ.

ಕೊಲ್ಲಿ ರಾಷ್ಟ್ರಗಳಿಗೆ ಹೋಗಿ

ವಾಣಿಜ್ಯಶಾಸ್ತ್ರ ಇರಾನಿಯವರು

ದಲಿತ ವಿದ್ಯಾರ್ಥಿಗಳು ಎಂ. ಬಿ. ಎ. ಗಿಂತಲೂ ಎಂ. ಕಾಂ ಗೆ ಹೆಚ್ಚು ಬರುವರು. ಅನೇಕರು ಪ್ರತಿಶತ55ಕ್ಕಿಂತ ಹೆಚ್ಚು ಅಂಕ ಪಡೆದು ಪಾಸಾದರೂ ಬಿ.ಕಾಂ.ನಲ್ಲಿ ಪ್ರತಿಸತ 55ಕ್ಕಿಂತ ಕಮ್ಮಿ ಅಂಕ ಪಡೆದು ಬಂದಿರುವುದರಿಂದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಹುದ್ದೆ ಸಿಗುವುದಿಲ್ಲ. ದಲಿತ ಅಭ್ಯರ್ಥಿ ಎಂ.ಕಾಂ.ನಲ್ಲಿ ಶೇ. 55 ಪಡೆದವನನ್ನು ಅಧ್ಯಾಪಕ ಹುದ್ದೆಗೆ ಸೂಚಿಸಿದಾಗ ಉಪಕುಲಪತಿಗಳು ಬಿ. ಕಾಂ.ನಲ್ಲಿ ಶೇಕಡಾ 55 ಪಡೆದಿಲ್ಲ ಎಂಬ ಕಾರಣಕ್ಕೆ ನಿರಾಕರಿಸಿದರು. ಇದೇನೆಇದ್ದರೂ ಇಲ್ಲಿಯ ಅದ್ಯಾಪಕ ಹುದ್ದೆಗಿಂತ ಹೆಚ್ಚಿನ ಹುದ್ದೆಗಳು ಎಂ.ಕಾಂ.ಓದಿದ ದಲಿತರಿಗೆ ಲಭ್ಯವಾಗುವುವು. ಕ್ರಿಯಾಶೀಲರಿಗೆ ಜಗತ್ತು ವಿಶಾಲವಾಗಿದೆ. ಕೊಲ್ಲಿ ರಾಷ್ಟ್ರಗಳಿಗೆ ಅಥವಾ ಇತರೆ ರಾಷ್ಟ್ರಗಳಿಗೆ ಹೋಗಿ ದುಡಿಯಲು ಪ್ರಯತ್ನಿಸಬೇಕು.

ನೇಮಕಾತಿ ಮಾಡುವಾಗ ದಲಿತರಿಗೆ ಪ್ರಾಧಾನ್ಯತೆ ಕೊಡಬೇಕ

ಕನ್ನಡ ಹಾ.ಮಾ. ನಾಯಕ

ದಲಿತೋದ್ಧಾರಕ್ಕಾಗಿ ಬಾಹ್ಯರೂಪದ ಬದಲಾವಣೆಗಳಾಗಿವೆ. ಇರುವಂಥ ಲಾಭದ ದೊಡ್ಡ ಮೊತ್ತ ಕೂಡ ದಲಿತರಲ್ಲೇ ಇರುವ ಬಹುಪಾಲು ಸಾಮಾನ್ಯ ಜನತೆಗೆ ದಕ್ಕದೆ ಹೋಗಿದೆ. ಮೀಸಲಾತಿ ಮೊದಲಾದ ಸೌಲಭ್ಯಗಳು ತೀರ ಕೆಳಮಟ್ಟದ ದಲಿತರಿಗೆ ಮೊದಲು ಸಿಗುವ ಹಾಗೆ ಏರ್ಪಾಡು ಮಾಡಬೇಕು.

ಇತ್ತೀಚಿನ ವರ್ಷಗಳಲ್ಲಿ ಹಿಂದಿನ ದಶಕಕ್ಕಿಂತಲು ಹೆಚ್ಚು ಧೈರ್ಯ ಹಾಗೂ ಸ್ಪರ್ಧಾತ್ಮಕ ಮನೋಭಾವದ ದಲಿತ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಮನೆಯ ಆರ್ಥಿಕ ಸ್ಥಿತಿ ಗಂಭೀರವಾಗಿ

ರುವುದರಿಂದ ಸಂಶೋಧನೆಗೆ ಹಿಂದೇಟು ಹ
ನೌಕರಿ ಬಯಸುತ್ತಾರೆ. ಹಂಗಾಮಿ ನೇಮಕ
ಮಾಡುವಾಗ ದಲಿತರಿಗೆ ಪ್ರಾಧಾನ್ಯತೆ ಕ
ಬೇಕು. ಆಗ ಮೀಸಲಾತಿಯಲ್ಲಿ ಏರು ಪೇರಾಗ
ಸಾಧ್ಯತೆ ಕಡಿಮೆಯಾಗುತ್ತದೆ. ಇದೇನೆ
ರೂ ದಲಿತ ವಿದ್ಯಾರ್ಥಿಗಳು ಅಲ್ಪತೃಪ್ತಿ
ಮನೋಭಾವನೆ ಬಿಟ್ಟು ಮೀಸಲಾತಿ ಒಂದು
ವೆಂದು ತಿಳಿದು ಸ್ಪರ್ಧಾತ್ಮಕ ಮನೋಭಾವ
ಛಲದಿಂದ ಮುಂದೆ ಬರಬೇಕು. ದಲಿತ ವಿದ್ಯಾ
ಗಳಿಗೆಂದೆ ಪ್ರತ್ಯೇಕ ಹಾಸ್ಟೆಲ್ಲು ನಿರ್ಮಿಸಿ ಹ
ಕಾಲೋನಿ ಮಾಡುವುದು ಅಸಹ್ಯ. ಎಲ್ಲರೊ
ಒಂದಾಗಿ ಬದುಕುವ ಅವಕಾಶಗಳಿರಬೇಕು.

ಪ್ರೊಫೆಸರ್‌ಗಳ ಜೊತೆಯಲ್ಲಿ ಪಂಚಮ ಮಾತುಕತೆ

ಗ್ರಂಥಾಲಯ ವಿಜ್ಞಾನ ಎಂದರೆ ಅಸ್ಪೃಶ್ಯರು ಪ್ರವೇಶಿಸಲಾಗದ ಈಸಲಾಗದ ಸರೋವರ ಎಂಬಂತೆ ನಡೆದುಕೊಂಡು ಬರುತ್ತಿದೆ. ವಿಶ್ವವಿದ್ಯಾನಿಲಯದ ಆರು ಗ್ರಂಥಾಲಯಗಳಲ್ಲಿ ಒಬ್ಬನೇ ಒಬ್ಬ ಅಸ್ಪೃಶ್ಯನು ಕೆಲಸದಲ್ಲಿರದೆ ಈ ಸರಸ್ವತೀ ಭಂಡಾರವು ಮನು ನಿಯಮಗಳನ್ನು ಪಾಲಿಸುತ್ತದೆ. ಈ ಬಗ್ಗೆ ಗ್ರಂಥಾಲಯ ಮುಖ್ಯಸ್ಥರಾದ ಶ್ರೀ ಖಾನರನ್ನು ಗ್ರಂಥಾಲಯ ವಿಜ್ಞಾನದ ಜಾತಿ ಸರೋವರದಲ್ಲಿ ಹಾಗೂ ಹೀಗೂ ಮೂರನೆ ದರ್ಜೆಯಲ್ಲಾದರೂ ಉತ್ತೀರ್ಣನಾದ ಅಸ್ಪೃಶ್ಯ ಎಸ್. ಬಸವರಾಜ್‌ರು ಭೇಟಿ ಮಾಡಿದಾಗ ಮುಖ್ಯಸ್ಥರ ಮಾತುಗಳು ಇಂತಿವೆ—

ಶಿಸ್ತಿನ ನೆಪದಲ್ಲಿ ಕತ್ತಲೆ!

ಭೌತಶಾಸ್ತ್ರ ಸಂಜೀವಯ್ಯನವರು

ಎಂಥದೇ ಪ್ರಸಂಗದಲ್ಲು ದಲಿತ ವಿದ್ಯಾರ್ಥಿಳು ಕೂಡ ತಮ್ಮ ಪ್ರತಿಭೆಯಿಂದಲೇ ಮುಂದೆ ರಬೇಕಾಗುತ್ತದೆ. ಅಲ್ಲದೆ ಅವರು ಮುಂದೆ ಂದದ್ದು ಹಾಗೆಯೆ. ಈ ಒಂದು ಸಂಕ್ರಮಣದ ಟ್ಟದಲ್ಲಿ ಶಿಕ್ಷಣ ತೆಳುವಾಗುವುದು ಅನಿವಾರ್ಯ ಾಗಿದೆ. ಆದರೆ ಮುಂದಿನ ಘಟ್ಟದಲ್ಲಿ ಅದರ ಜವಾದ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಸ್ತಿನ ನೆಪದಲ್ಲಿ ಸಮಾಜದ ಬಹುಪಾಲು ಜನ ತ್ತಲೆಯಲ್ಲೆ ಉಳಿದು ಕೆಲವೇ ಜನ ಲ್ಲಾ ಲಾಭವನ್ನು ಗಿಟ್ಟಿಸುತ್ತಾರೆ. ದಲಿತರು ಲ್ಲಾ ಶೈಕ್ಷಣಿಕ ಕ್ಷೇತ್ರದಲ್ಲಿ ಪಸರಿಸಬೇಕು. ೀಸಲಾತಿ ದಲಿತರ ಬದುಕನ್ನು ಬದಲಿಸುವಲ್ಲಿ ಣನೀಯ ಪಾತ್ರವಹಿಸಿದೆ.

ದಲಿತರ ಮನೋವಿಜ್ಞಾನವೆ ನನಗೆ ತಿಳಿಯದಾಗಿದೆ !

ಮನೋವಿಜ್ಞಾನ ಕೃಷ್ಣಮೂರ್ತಿಯವರು

ಇಲ್ಲಿಗೆ ಕಲಿಯಲು ಬರುವ ದಲಿತ ವಿದ್ಯಾರ್ಥಿಳ ಮನೋ ವಿಜ್ಞಾನವೇ ನನಗೆ ತಿಳಿಯದಾದೆ. ಪರಿಶೀಲಿಸಲು ಹೋದರೆ ಜಾತಿಯ ಬಣ್ಣ ರುತ್ತದೆ. ನನಗೆ ಯಾವ ಜಾತಿಯು ಇಲ್ಲ. ಲಿತ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಪರೀಕ್ಷೆ ರೆದರೆ ಅಂಕಗಳು ಬಂದೇ ಬರುತ್ತವೆ. ನೋಟ್ಸ್ ೀಲೆ ಅವಲಂಬಿತವಾಗಿ ಬಹಳಷ್ಟು ಜನ ೃತೀಯ ದರ್ಜೆಯಲ್ಲಿ ಪಾಸಾಗುತ್ತಾರೆ. ಚೆನ್ನಾಗಿ ಂಕ ಪಡೆದವರಿಗೆ ಸಂಶೋದನಾ ಕ್ಷೇತ್ರದಲ್ಲಿ ವಕಾಶವಿದ್ದರೂ ನೌಕರಿ ಸೇರಿಬಿಟ್ಟರು. ದಲಿತ ಗೆ ಸಿಗುವ ಸವಲತ್ತು ಕಂಡು ಬೇರೆಯವರು ೊಟ್ಟೆಕಿಚ್ಚು ಪಡಬಹುದು. ಇದನ್ನೆಲ್ಲ ಲೆಕ್ಕಿದೆ ದಲಿತರು ಚೆನ್ನಾಗಿ ಓದಿ ಮುಂದೆ ಬಂಬೇಕು.

ದಲಿತರಿಗೆ ಛಲ ಬೇಕು

ಪ್ರಾಣಿಶಾಸ್ತ್ರ ದೇವರಾಜ ಸರ್ಕಾರ್‌ರವರು

ದಲಿತ ವಿದ್ಯಾರ್ಥಿಗಳಲ್ಲಿ ಛಲ ಬೇಕು. ಛಲಾರನೊಬ್ಬ ಬಡತನ ಜಿಡ್ಡುಗಟ್ಟಿದ ವಾತಾವರಣ ದಲ್ಲಿಯೂ ಗುರಿ ತಲುಪ ಬಲ್ಲನು. ಎಲ್ಲಾ ೀತಿಯ ಸೌಲಭ್ಯಗಳು ಮನುಷ್ಯನನ್ನು ಕ್ರಿಯಾ ೀನನನ್ನಾಗಿ ಮಾಡಬಲ್ಲವು. ಎಲ್ಲವನ್ನೂ ೊರಗಿನಿಂದಲೇ ಒದಗಿಸುವುದು ಅನಾರೋಗ್ಯ ಕರವಾದದ್ದು.

ಓದಿರಿ

ಲಂಕೇಶ್ ಪತ್ರಿಕೆ

ಪ್ರಭಾವ ಇದ್ದ ಸವರ್ಣೀಯರಿಗೇ .... : ಖಾನ್

ಮೀಸಲಾತಿ ಬಗ್ಗೆ :

1973ರ ತನಕ ವಿಶ್ವವಿದ್ಯಾನಿಲಯದಲ್ಲಿ ಮೀಸಲಾತಿ ಇರಲಿಲ್ಲ. ಆದ್ದರಿಂದ ಅಂದು ಅವರಿಗಿಷ್ಟ ಬಂದ ಹಾಗೆ ಅವರಿಗೆ ಬೇಕಾದವರನ್ನು ತುಂಬುತ್ತಿದ್ದರು. ಆದ್ದರಿಂದ ತುಂಬಿದೆ. ಇತ್ತೀಚೆಗೆ ಇಬ್ಬರು ಯಾರೋ ಸತ್ತಾಗ ಖಾಲಿಯಾದ ಉದ್ಯೋಗಗಳಲ್ಲಿ ಒಂದು ಯಂಗೊ ಭರ್ತಿಯಾಯ್ತು. ಇನ್ನೊಂದಕ್ಕೆ ಹರಿಜನ ಅಭ್ಯರ್ಥಿಯನ್ನು ನಾನು ಸೂಚಿಸಿದರೂ ಅದೂ ಪ್ರಭಾವ ಇದ್ದ ಸವರ್ಣೀಯರಿಗೇ ಸಿಕ್ತು.

ದಲಿತ ವಿದ್ಯಾರ್ಥಿಗಳ ಬಗ್ಗೆ :

ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕೀಳರಿಮೆ ಜಾಸ್ತಿ. ಹೆಚ್ಚಿಗೆ ಪ್ರಯತ್ನಾನೆ ಮಾಡೋದಿಲ್ಲ. ಸಮಸ್ಯೆ ಬಂದಾಗ ಅಧ್ಯಾಪಕರನ್ನು ಭೇಟಿ ಮಾಡುವುದಿಲ್ಲ. ನಾನೇ ಎಷ್ಟೊ ಈ ವಿದ್ಯಾರ್ಥಿಗಳಿಗೆ ಗೈಡ್ ಮಾಡ್ತಾ ಇರ್ತೀನಿ. ಕೆಲವರು ಸರಿಯಾಗಿ ಓದ್ರಿ ಬನ್ರಿ ಎಂದರೂ ಬರೋದಿಲ್ಲ. ಒಬ್ಬರಿಗೆ ಡೆಪ್ಯುಟಿ ಲೈಬ್ರೇರಿಯನ್ ಪೋಸ್ಟ್ ಕೊಡಿಸ್ತೀನಿ ಅಪ್ಲೈ ಮಾಡ್ರಿ ಅಂದ್ರೆ ಅವ್ರು ನನ್ನ ಕೈಲಿ ಆಗೊಲ್ಲ ಅನ್ನೋದ? ನಾನು ಸಿಟ್ಟಾಗಿ ಬೈದಿರುವೆ. ಇನ್ನೊಬ್ಬರು ಮನೆಗೆ ಕರ್ಕೊಂಡು ಬಂದು ಕಾಫಿ ಕೊಟ್ರೂ ಕುಡಿಯೋಕೆ ಒದ್ದಾಡ್ತಾರೆ! ಕಳೆದ ವರ್ಷ ಎಂ.ಲಿಬ್.ಎಸ್‌ಸಿ.ಗೆ ಸೇರಲು ಒಬ್ಬರೂ ಹರಿಜನರು ಬರಲಿಲ್ಲ. ಯಾಕಪ್ಪ? ಈ ಪ್ರಶ್ನೆ ನಿಮಗೇ ಕೇಳೋದು.

ಬ್ರಾಹ್ಮಣರೇ ಕಷ್ಟದಲ್ಲಿ !

ಪತ್ರಿಕೋದ್ಯಮ ನಾಗರಾಜರು

ಅನೇಕ ದಲಿತ ವಿದ್ಯಾರ್ಥಿಗಳು ಸವರ್ಣೀಯ ವಿದ್ಯಾರ್ಥಿಗಳಿಗಿಂತ ಚೆನ್ನಾಗಿ ಬರೆಯುತ್ತಿದ್ದರು. ಆದರೆ ಕೆಲದಲಿತ ವಿದ್ಯಾರ್ಥಿಗಳು ಅಭ್ಯಾಸದ ಕಡೆಗೆ ಲಕ್ಷ್ಯಕೊಡದಿರುವ ಪ್ರಸಂಗಳಿವೆ. ಕ್ರಿಶ್ಚಿಯನ್ನರಿಗೆ ಮುಸ್ಲಿಮರಿಗೆ ಪರದೇಶದಿಂದ ಹಣ ಬರುತ್ತದೆ. ಆದರೆ ಬಡಹರಿಜನಗಿರಿಜನರು ಕಷ್ಟದ ಸ್ಥಿತಿಯಲ್ಲಿದ್ದಾರೆ, ಅವರಿಗೆ ಹೊರದೇಶದಿಂದ ಹಣ ಬರುವುದಿಲ್ಲ. ಬ್ರಾಹ್ಮಣರು ಇಲ್ಲಿಯವರೆಗೆ ತಮ್ಮ ಶಕ್ತ್ಯಾನುಸಾರ ಹರಿಜನರಿಗೆ ಸಹಾಯ ಮಾಡುತ್ತಿದ್ದರು. ಆದರೆ ಈಗ ಅವರು ಕಷ್ಟದಲ್ಲಿರುವುದರಿಂದ ಹೆಚ್ಚು ಹೆಚ್ಚಾಗಿ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲ. ಮೊನ್ನೆತಾನೆ ಪತ್ರಿಕೋದ್ಯಮ ವಿಭಾಗದಲ್ಲಿ ಭರ್ತಿಮಾಡಿಕೊಂಡ ೩ ಅಧ್ಯಾಪಕ ಹುದ್ದೆಗಳಲ್ಲಿ ಒಂದನ್ನು ನ್ಯಾಯಯುತವಾಗಿ ದಲಿತರಿಗೆ ಕೊಡಬೇಕಾಗಿತ್ತು. ತಪ್ಪಾಗಿದೆ. ಈಗ ದಲಿತರೊಬ್ಬರನ್ನು ಅಧ್ಯಾಪಕ ಹುದ್ದೆಗೆ ತೆಗೆದುಕೊಳ್ಳುವ ಏರ್ಪಾಟು ನಡೆದಿದೆ.

ಇರಾನಿ ಸಾಧನೆಗಳು !

ಮಾನಸ ಗಂಗೋತ್ರಿಯ ವಾಣಿಜ್ಯಶಾಸ್ತ್ರ ವಿಭಾಗದ ಇರಾನಿ ಎಂಬ ಮುಖ್ಯಸ್ಥರ ದಲಿತ ವಿರೋಧಿ, ಜನವಿರೋಧಿ, ಕನ್ನಡ ವಿರೋಧಿ, ಸಾಧನೆಗಳನ್ನು ಅದೇ ವಿಭಾಗದವರು ಪಟ್ಟಿ ಮಾಡುತ್ತಾರೆ ನೋಡಿ:

ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ವಿವಿಧ ಕಡೆಗಳಿಂದ ಬಂದು ಸೇರುವ ವಿದ್ಯಾರ್ಥಿಗಳನ್ನು ಅತ್ಯಂತ ತರಗುಟ್ಟುವ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ. ಈ ಕೈಗಾರಿಕೋದ್ಯಮಿ ಸಂಜಾತರು ಇಂಗ್ಲೀಷ್‌ನಲ್ಲಿ ವಿದ್ಯಾರ್ಥಿಗಳಿಗೆ "ನೀವು ಫಾರಂ ನಂ.ಒಂದೊ,ಎರಡೋ, ಮೂರೋ?"ಎಂದುಪ್ರಶ್ನೆ ಹಾಕುತ್ತಾರೆ. ಒಬ್ಬೊಬ್ಬನೇ ವಿದ್ಯಾರ್ಥಿ ಉತ್ತರ ಕೊಡಬೇಕು. ಒಂದು ವೇಳೆ ವಿದ್ಯಾರ್ಥಿ ತಾನು ಫಾರಂ ಒಂದರಿಂದ ಅಥವಾ ಎರಡರಿಂದ ಸೀಟು ಪಡೆದೆನೆಂದು ಹೇಳಿದ ಪಕ್ಷದಲ್ಲಿ ಇರಾನಿ ಅಸಹ್ಯ ಕಂಡಂತೆ ಕಣ್ಣುಗಳಲ್ಲಿ ಮಡಿ ಕಾರಿ "ಅದ್ಕೆ ನಿಮ ಭಾಷೆ ಹಾಗಿದೆ. ಕೂತ್ಕೊಳ್ಳಿ. ನೀವು ಎಸ್ಸಿಗಳು ಎಂದಿಗೂ ಎಕ್ಸಿಕ್ಯುಟಿವ್ ಲೈನ್‌ಗೆ ಲಾಯಕ್ಕಲ್ಲ. ನೀವು ಗುಮಾಸ್ತರೋ ಮತ್ತೊಂದೊ ಆಗೋಕೆ ಲಾಯಕ್ಕು" ಎಂದು ಗೊಳ್ಳನೆ ನಕ್ಕು ದೇಹ ಕುಣಿಸುತ್ತಾರೆ. ಸವರ್ಣೀಯ ವಿದ್ಯಾರ್ಥಿಗಳು ಪ್ರೊಫೆಸರ್ ನಗು ಜೊತೆ ನಗು ಸೇರಿಸುತ್ತಾರೆ. ದಲಿತ ವಿದ್ಯಾರ್ಥಿ ಭೂಮಿಗಿಳಿಯುತ್ತಾನೆ.

ಹೇಳಿ, ಈ ಫಾರ್ಸಿ ಇರಾನಿ ಯಾವ ಬ್ರಾಹ್ಮಣನಿಗೆ ಕಮ್ಮಿ; ಯಾವ ಸವರ್ಣೀಯನಿಗೆ ಕಮ್ಮಿ.

ಶಿವರಾಮು ಕಾಡನಕುಪ್ಪೆ

ಕಥೆಯಾಗುವ ವಿದ್ಯಾರ್ಥಿ ಬವಣೆಗಳು

ಮೈಸೂರು ಜಿಲ್ಲೆಯಲ್ಲಿ ಜೂನಿಯರ್, ಪ್ರಥಮ ದರ್ಜೆ, ಖಾಸಗಿ ಕಾಲೇಜುಗಳು ಸೇರಿದಂತೆ 16 ಕಾಲೇಜುಗಳು ಇವೆ. ಆದರೆ ಮೈಸೂರು ನಗರದಲ್ಲೆ 29 ಕಾಲೇಜುಗಳು ಇವೆ. ತಾಲ್ಲೂಕು ಕೇಂದ್ರಗಳಲ್ಲಿ ಬಹುತೇಕ ಆಯಾಯ ತಾಲ್ಲೂಕು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ.

ಆದರೆ ಮೈಸೂರು ನಗರ ಕಾಲೇಜುಗಳಲ್ಲಿ ಈ ಜಿಲ್ಲೆಯವರಿಗಿಂತ ಬೇರೆ ಜಿಲ್ಲೆಗಳಿಂದ ಬಂದವರಾಗಿರುತ್ತಾರೆ.

ಈಗ ಸದ್ಯದ ಸಂದರ್ಭದಲ್ಲಿ ಇತರ ವಿದ್ಯಾರ್ಥಿಗಳ ಅನ್ವಯ ದಲಿತ ವಿದ್ಯಾರ್ಥಿಗಳು ಮುಂದಿನ ವ್ಯಾಸಂಗಕ್ಕೆ ಮೈಸೂರಿಗೆ ಬಂದಿರುವರು. ಇವರುಗಳು ಹಾಸ್ಟೆಲುನ್ನು ನಂಬಿಕೊಂಡು ಬಂದವರಾಗಿರುತ್ತಾರೆ. 1980–81ರ ಅಂಕಿ-ಅಂಶದ ಪ್ರಕಾರ ಮೈಸೂರಿನ ನಗರ ಕಾಲೇಜುಗಳಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳನ್ನೊಳಗೊಂಡು ಒಟ್ಟು 29 ಕಾಲೇಜುಗಳಿದ್ದು ದಲಿತ ವಿದ್ಯಾರ್ಥಿಗಳ ಸಂಖ್ಯೆ 2244. ಇವರಲ್ಲಿ 1044 ವಿದ್ಯಾರ್ಥಿಗಳು ಮಾತ್ರ ಹಾಸ್ಟೆಲಿನ ವ್ಯವಸ್ಥೆಯುಳ್ಳವರಾಗಿದ್ದಾರೆ.

ಸೆಂಟ್ ಫಿಲೋಮಿನ, ಮಹಾರಾಜ ಹಾಗೂ ಮಹಾರಾಣಿ ಕಾಲೇಜು ಹಾಸ್ಟೆಲ್‌ಗಳು ಸಾರ್ವಜನಿಕ ಹಾಸ್ಟೆಲುಗಳಾಗಿರುತ್ತವೆ. ಆದರೆ ಈಚೆಗೆ ಮೈಸೂರಿನ ಜಿಲ್ಲಾಧಿಕಾರಿಯವರು ಹಿಂದುಳಿದ ವರ್ಗಗಳ ಕಾಲೇಜು ಹಾಸ್ಟೆಲ್‌ನ್ನು ತೆರೆದಿದ್ದಾರೆ. ಇದರಲ್ಲಿ ಎಲ್ಲಾ ಕೋಮಿನ ವಿದ್ಯಾರ್ಥಿಗಳು ಇರುತ್ತಾರೆ. ಅಲ್ಲದೆ, ಆಯಾಯ ಮತಧರ್ಮದವರು ತಮ್ಮ ತಮ್ಮ ವಿದ್ಯಾರ್ಥಿಗಳಿಗೆ ಹಲವಾರು ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿದ್ದಾರೆ. ಇವುಗಳಿಗೆ ದಲಿತ ವಿದ್ಯಾರ್ಥಿಗಳ ಪ್ರವೇಶವಿಲ್ಲ. ನಮ್ಮ ವಿಶ್ವವಿದ್ಯಾನಿಲಯವು ದಲಿತ ವಿದ್ಯಾರ್ಥಿ
ಗಳಿಗಾಗಿಯೇ ಪ್ರತ್ಯೇಕವಾಗಿ ಒಂದು ಹಾಸ
ನ್ನು ಕಟ್ಟಿಸಿರುತ್ತಾರೆ. ಸಾರ್ವಜನಿಕ ಹಾಸ
ಗಳಿಗೆ ಶೇ. 18 ರಂತೆಯೆ ಸೀಟು ತೆಗೆದುಕೊ
ವುದರಿಂದ ಅಲ್ಲಿಗೆ ದಲಿತ ವಿದ್ಯಾರ್ಥಿಗಳು ಕಡ
ಪ್ರಮಾಣದಲ್ಲಿ ಸೇರುತ್ತಾರೆ. ಮಹಾರಾ
ಮಹಾರಾಜ, ಯುವರಾಜ ಕಾಲೇಜುಗ
ಕಾಮರ್ಸ್ ಇಲ್ಲ. ಇದು ಡಿ. ಬನುಮು
ಜೆ. ಎಸ್.ಎಸ್., ಸೆಂಟ್‌ಫಿಲೋಮಿನ ಕಾಲೆ
ಗಳಲ್ಲಿ ಮಾತ್ರ ಇವೆ. ಕಾಮರ್ಸ್ ತೆ
ಕೊಂಡೇ ಓದಬೇಕೆನ್ನುವ ವಿದ್ಯಾರ್ಥಿ
ಹಾಸ್ಟಲಿಲ್ಲವೆ ಓದಬೇಕು. ಹಾಗಾಗಿ ಹಾಸ
ಸೌಲಭ್ಯ ಇರುವ ಬಿ. ಎ., ಬಿ.ಎಸ್‌ಸಿ. ಇ
ವ್ಯಾಸಂಗವನ್ನೆ ದಲಿತ ವಿದ್ಯಾರ್ಥಿಗಳು ಅನಿ
ರ್ಯವಾಗಿ ಮುಂದುವರಿಸಬೇಕಾಗುತ
ಪಿ.ಯು.ಸಿ., ಎಲ್.ಎಲ್.ಬಿ., ಬಿ.ಎಡ
ಟಿ.ಸಿ.ಎಚ್. ಕಾಲೇಜುಗಳಿಗೆ ಈವರೆಗೂ ಹಾ
ಲ್ ಇಲ್ಲನೆ ದಲಿತ ವಿದ್ಯಾರ್ಥಿಗಳ ಸಂಖ್ಯೆ ಕಡ
ಪ್ರಮಾಣದಲ್ಲಿದೆ.

ಹೆಬ್ಬಾಳೆ ಲಿಂಗರಾಜು

ಜಾತಿ ವಿಷ ಬಿತ್ತುವ ವಾರ್ಡನ್ ಡಾ. ಪರಶಿವಮೂರ್ತಿ

ನಾನು ಮಾನಸ ಗಂಗೋತ್ರಿ ಸ್ನಾತಕೋತ್ತರ ವಿದ್ಯಾರ್ಥಿನಿಲಯ ಹೊಸ ವಿಭಾಗದ ದಲಿತ ವಿದ್ಯಾರ್ಥಿ. ತಾ. ೪-೧೦-೮೧ರ ಭಾನುವಾರ ಒಂದು ಗಂಟೆ ಸಮಯದಲ್ಲಿ ಊಟ ಮಾಡುತ್ತಿದ್ದಾಗ ನಮ್ಮ ವಾರ್ಡನ್ ಡಾ|| ಪರಶಿವಮೂರ್ತಿ ಡೈನಿಂಗ್ ಹಾಲ್‌ಗೆ ಬಂದು ನನ್ನ ಪಕ್ಕದಲ್ಲಿದ್ದ ನಂಜುಂಡಮೂರ್ತಿ ಎಂಬ ಇನ್ನೊಬ್ಬ ದಲಿತ ವಿದ್ಯಾರ್ಥಿಯನ್ನು ಉದ್ದೇಶಿಸಿ ನೀವು ಅಂದರೆ SC, ST ಮತ್ತು BT ವಿದ್ಯಾರ್ಥಿಗಳು ಊಟದ ಟಿಕೇಟನ್ನು ಬೇರೆಯವರಿಗೆ ಕೊಡುವುದು ಅಥವಾ ಪಕ್ಕದ ಹಾಸ್ಟಲಿನ ವಿದ್ಯಾರ್ಥಿಗಳಿಗೆ ಬದಲಾಯಿಸುವುದು ತಿಳಿದುಬಂದಿದೆ; ಹೀಗೆ ಟಿಕೇಟು ಬದಲಾಯಿಸಬಾರದು ಎಂದು ಹೇಳುತ್ತಾ ಇನ್ನೊಬ್ಬ ಸವರ್ಣೀಯ ವಿದ್ಯಾರ್ಥಿಯನ್ನು ಉದ್ದೇಶಿಸಿ, ನೀವು ಬೇಕಾದರೆ ಟಿಕೇಟನ್ನು ಬೇರೆಯವರಿಗೆ ಕೊಡಿ, ಗೆಸ್ಟ್ ಕರಕೊಂಡು ಬಂದು ನಿಮ್ಮ ಟಿಕೇಟ್ ಕೊಟ್ಟು ಊಟ ಮಾಡಿಸಬಹುದು. ಏಕೆಂದರೆ ನೀವು Paying Boarders, ಮನೆಯಿಂದ ಹಣ ತಂದು ಕಟ್ಟುತ್ತೀರಿ. ಆದರೆ ಈ SC, ST ವಿದ್ಯಾರ್ಥಿಗಳಿಗೆ ಗೌರ್ನಮೆಂಟ್ ಕೊಡುತ್ತಿರುವುದರಿಂದ ಅವರಿಗೆ ಈ ರೀತಿಯ ಅವಕಾಶವನ್ನು ನಾನು ಖಂಡಿತಾ ಕೊಡುವುದಿಲ್ಲ ಎನ್ನುತ್ತಾ ದಲಿತ ವಿದ್ಯಾರ್ಥಿಗಳನ್ನು ಸಾಕಷ್ಟು ತೆಗಳಿದರು. ಇವರು ನಿಮ್ಮ ಸಮಕ್ಕೆ ಕೂತುಕೊಂಡು ಅನ್ನ ತಿನ್ನುತ್ತಿದ್ದಾರೆ ಇದಕ್ಕೆಲ್ಲ ಆಸ್ಪದ ಕೊಡಬಾರದು ಎಂದರಲ್ಲದೆ ಅಡಿಗೆಯವರನ್ನು ಕರೆಸಿ SC, ST ವಿದ್ಯಾರ್ಥಿಗಳು ಟಿಕೇಟನ್ನು ಬದಲಾಯಿಸದಂತೆ ನೋಡಿಕೊಳ್ಳಿ. ಹಾಗೇನಾದರೂ ಬಂದರೆ ಅವರಿಗೆ ಊಟ ಹಾಕಬೇಡಿ ಎಂದು ತಾಕೀತು ಮಾಡಿದರು. ಅಷ್ಟೇ ಅಲ್ಲದೆ ಅಡಿಗೆಯವರಿಗೆ ಹಾಗೂ ಸವರ್ಣೀಯ ಹುಡುಗರಿಗೆ SC, ST ವಿದ್ಯಾರ್ಥಿಗಳು ಯಾರು ಎಂದು ಗುರುತಿಸುವುದಕ್ಕಾಗಿ ದಲಿತ ವಿದ್ಯಾರ್ಥಿಗಳ ಹೆಸರಿನ ಒಂದು ಲಿಸ್ಟನ್ನು ಕೊಟ್ಟರು ಮತ್ತು ಈ ಬಗ್ಗೆ ನೋಟೀಸ್ ಬೋರ್ಡಿನಲ್ಲೂ ಸಹ ಹಾಕಿದರು. ಇದುವರೆಗೆ ಯಾವರೀತಿಯ ಜಾತಿ ಭೇದಾಭಿಪ್ರಾಯಗಳಿಲ್ಲವೆ ಒಟ್ಟಾಗಿದ್ದ ವಿದ್ಯಾರ್ಥಿಗಳ ನಡುವೆ ಮನಸ್ತಾಪ ಬೆಳೆಯಲು ಆರಂಭವಾಯ್ತು. ಏಕೆಂದರೆ ಯಾರಾದರು ಗೆಸ್ಟ್ ಬಂದರೆ ಅಡಿಗೆಯವರು ನೀವು SC ಕಡೆಯವರೊ ಅಥವಾ ಬೇರೆ ಗುಂಪಿಗೆ ಸೇರಿದವರೊ ಎಂದು ಪ್ರಶ್ನಿಸತೊಡಗಿದರು! ಈ ವಿಷಯದ ಬಗ್ಗೆ ಹಾಸ್ಟಲಿನ ದಲಿತ ವಿದ್ಯಾರ್ಥಿಗಳು ಸೇರಿ ರಿಜಿಸ್ಟ್ರಾರ್ ಹತ್ತಿರ ನಿವೇದಿಸಿಕೊಂಡೆವು. ಅವರು "ನಿಮಗೆ ಗೌರ್ನಮೆಂಟ್ ಹಣ ಕೊಡುತ್ತದೆ ಎಂದರೆ ಅದು ಹಣವಲ್ಲವೇನು? ನಿಮಗೆ ಬೇರೆ ಸವರ್ಣೀಯರಿಗೆ ಬೇರೆ ರೂಲ್ಸ್ ಇದೆಯೇನು? ವಾರ್ಡನರದು ಸರ್ವಥಾ ತಪ್ಪು. ಇದರ ಬಗ್ಗೆ ಕೂಲಂಕುಷವಾಗಿ ವಿಚಾರಿಸಿ ಪರಶಿವಮೂರ್ತಿಯನ್ನ ತೆಗೆದುಹಾಕುವುದಾಗಿ" ತಿಳಿಸಿದರು.

ರಿಜಿಸ್ಟ್ರಾರವರ ಮಾತು ನಂಬಿ ಕಾಯುತ್ತಿದ್ದೇವೆ. —ಕೆ. ಎಲ್. ಬಸವರಾಜು

ಹಾಸ್ಟಲ್ ಸ್ಮಶಾನವಾಗದಿರ

ನನ್ನ ಮಿತ್ರ ಊರಿಗೆ ಹೋಗಿದ್ದ ಕಾ
ಅವನ ಊಟದ ಟಿಕೇಟಿನಲ್ಲಿ ಊಟಕ್ಕೆ ಕೂತಿ
ಸಾಂಬಾರು ಕಲೆಸಿ ಒಂದೆರಡು ತುತ್ತು ತಿನ್ನುವ
ರಲ್ಲಿ ವಿದ್ಯಾರ್ಥಿಗಳ ಕ್ಷೇಮ ವಿಚಾರಿಸುತ್ತಾ ಬ
ವಾರ್ಡನ್ ಡಾ|| ಪರಶಿವಮೂರ್ತಿ ನನ್ನ
ಕಂಡು ಹುಬ್ಬೇರಿಸಿ "ಯಾರ್ರಿ ನೀವು ಹೊ
ನವರಾ?" ಎಂದರು. ಸಂಕೋಚವಾಗಿ "ಹೌ
ಸಾರ್" ಎಂದೆ. "ಹೀಗೆಲ್ಲ ಬೇರೆಯವರ ಟಿಕೇ
ಬರಬಾರದು ಕಣ್ರಿ" ಎಂದರು. ಬಾಯಿಗಿ
ತುತ್ತು ಬಾಯಲ್ಲೇ ಉಳಿಯಿತು. ನಾನು ಉ
ಕ್ಕೆ ಹೋದಾಗ ಸರ್ವರ್ ಒಬ್ಬ ವಿನೀತನ
"ಸಾರ್ ನಿಮ್ಮ ಟಿಕೇಟ್ ರೂಂ ಯಾವುದು
ಎಂದು ಕೇಳಿದ್ದ. "ಒಬ್ಬ ಬ್ರಾಹ್ಮಣಂದು ಕಣ
ಊಟ ಹಾಕು'' ಎಂದೆ. ಅವನಿಗೆ ಮುಜು
ವಾಗಿ ಮಾತಾಡದೆ ಊಟ ಹಾಕಿದ್ದ. ಟಿಕೇ
ಮಾರಿವರೆ ಅಥವಾ ಬೇರೆಯವರಿಗೆ ಕೊಟ್ಟ
'ಅಲ್ಪ'ರಾಗುವ ಮತ್ತು ರಜಾದಲ್ಲಿ ಹಾಸ್ಟ
ಉಳಕೊಂಡರೆ 'ಕಂಜೂಸ್'ಗಳಾಗುವ ದ
ವಿದ್ಯಾರ್ಥಿಗಳು ಪರೋಕ್ಷವಾಗಿ ದ್ವಿತೀಯ ದ
ನಾಗರೀಕರಾಗಿದ್ದಾರೆ!

ಈ ಘಟನೆ ಜಾತಿಯ ಬಣ್ಣ ಪಡಕೊಂ
ಹಾಸ್ಟಲ್ ಸ್ಮಶಾನವಾಗಿ ವಿದ್ಯಾರ್ಥಿಗಳ ವ
ಮನದ ನಡುವೆ, ಒಡೆಯಲಾರದ ಗೋಡೆ ಎ
ನಮ್ಮ ಕಣ್ಣೆದುರಿನ ಕ್ರೂರ ಘಟನೆಗಳಲ್ಲಿ ಇ
ಒಂದಾದೀತು. ಹಾಗಾಗದಿರಲಿ ಎಂದು ಹಾರೈ

—ಕೆ. ಪಿ. ಸುರೇಶ್, ಮಾನಸಗಂಗೋ

ವರ್ಷದಿಂದ ವರ್ಷಕ್ಕೆ ದಲಿತ ವಿದ್ಯಾರ್ಥಿಗಳು ಲ್ಲಾ ವಿದ್ಯಾಸಂಸ್ಥೆಯಲ್ಲಿಯೂ ಗಣನೀಯ ಮಾಣದಲ್ಲಿ ಹೆಚ್ಚುತ್ತಿದ್ದಾರೆ. ಕರ್ಣಾಟಕದ ತಿಯೊಂದು ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಲಿತ ವಿದ್ಯಾರ್ಥಿಗಳು ಹಾಸ್ಟಲ್ಲಿಗಾಗಿ ಅನುಭವಿ ವ ಕಷ್ಟವನ್ನೆ ಇಲ್ಲಿಯ ವಿದ್ಯಾರ್ಥಿಗಳು ಅನುಭ ಸುತ್ತಾ ಬಂದಿದ್ದಾರೆ. ವಿದ್ಯಾರ್ಥಿನಿಲಯ ಗೆ, ದಲಿತ ವಿದ್ಯಾರ್ಥಿಗಳು ಸೇರುವಾಗಿನ ವಣೆ ಹೇಳತೀರದು. ಕಾಲೇಜು ಪ್ರಾರಂಭವಾಗಿ ಾಸ್ಟೆಲ್ ಸಿಗದೆ ಪಜೀತಿ ಪಡುತ್ತಾರೆ. ಕೊನೆಗೆ ಗೋ ಸೀಟು ಸಿಕ್ಕ ಕೆಲವರು ನೂರಾರು ಪಾಯಿಗಳ ಮುಂಗಡ ಹಣ ಕಟ್ಟಲಾಗದೆ ಳ್ಳಿಗಳಲ್ಲೆ ಉಳಿದ ಘಟನೆಗಳು ನೂರಾರು ಇವೆ.

ಮಹಾರಾಜ ಕಾಲೇಜಿನಲ್ಲಿ ಪ್ರತಿ ವರ್ಷ ತಪ್ಪ ಕೋಮುವಾರು ಗಲಭೆ ನಡೆಯುತ್ತಲೇ ಂದಿದೆ. ಮಹಾರಾಜ ಕಾಲೇಜಿನ ಹಾಸ್ಟಲಿನ ಥೆ ಒಂದಾದರೆ ವಿಶ್ವವಿದ್ಯಾನಿಲಯದ ಫಸ್ಟ್ ್ಲಿಕ್ ಹಾಸ್ಟೆಲ್‌ನ ಕತೆ ಇನ್ನೊಂದು. ಬರೀ ಲಿತ ವಿದ್ಯಾರ್ಥಿಗಳೇ ಇರುವ ಈ ಹಾಸ್ಟಲಿನಲ್ಲಿ ದ್ಯಾರ್ಥಿ ವೇತನ 125ರೂ ನಿಂದಲೇ ಎಲ್ಲಾ ತೆಯಬೇಕು. ಮೊನ್ನೆ ಮೊನ್ನೆ ಈ 125ರೂ ್ಲಿ ಮೆಸ್ಸು ನಡೆಸಲು ಆಗುವುದಿಲ್ಲ ನಿಮ್ಮಲ್ಲಿ ತಿಸುವವರು ಮುಂದೆ ಬನ್ನಿರೆಂದು ವಾರ್ಡನ್ನರು ಾಸ್ಟಲನ್ನು ನಿಲ್ಲಿಸಿದರು. ಎರಡು ದಿನ ಪೂರ್ತಿ ದ್ಯಾರ್ಥಿಗಳಿಗೆ ಊಟವಿರಲಿಲ್ಲ. ಈಗ ಸಮಾಜ ಲ್ಯಾಣ ಇಲಾಖೆಯವರು ವಹಿಸಿಕೊಂಡು ಇದೇ 25ರೂಗೆ ಎರಡು ಊಟ ಮಾತ್ರ ಕೊಡುತ್ತಿ ್ದರೆ. ಕಳೆದ ವರ್ಷ ವಿದ್ಯಾರ್ಥಿ ವೇತನವನ್ನು 5ಕ್ಕೆ ಹೆಚ್ಚಿಸಬೇಕೆಂದು ದ.ಸಂ.ಸ.ದ ಆಡಿ ಲ್ಲಿ ಹೋರಾಟ ನಡೆಸಿದ ಫಲವಾಗಿ ಈಗ 185 . ಮಂಜೂರು ಆಗಿದೆಯಂತೆ. ಆದರೆ ಈ ಇನ್ನೂ ಹಾಸ್ಟಲ್‌ಗಳನ್ನು ತಲುಪಿಲ್ಲ.

ಮೈಸೂರಿಗೆ ಮೆರಗು ಕೊಡುವ ಸ್ಥಳಗಳಲ್ಲಿ ಗೋತ್ರಿಯನ್ನು ಹೆಸರಿಸಬೇಕು. ಇಲ್ಲಿ ತಕೋತ್ತರ ವ್ಯಾಸಂಗಕ್ಕಾಗಿ ಬರುವ ದಲಿತ ್ಯಾರ್ಥಿಗಳಲ್ಲಿ ವಿದ್ಯಾರ್ಥಿನಿಯರು ಸೇರಿದಂತೆ 3 ವಿದ್ಯಾರ್ಥಿಗಳಿರುತ್ತಾರೆ. ವರ್ಷ ವರ್ಷವೂ ಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದು ನ ವಿದ್ಯಾರ್ಥಿನಿಲಯಗಳಲ್ಲಿ ಸೀಟು ತೆಗೆದು ಳ್ಳುವುದು ಬಲು ಪ್ರಯಾಸದ ಕೆಲಸವೇ ಸರಿ. ನ ಹಾಸ್ಟೆಲುಗಳ ರೂಲ್ಸು ರಾಜಕೀಯಮ ಾಗಿರುತ್ತದೆ. ಪ್ರತಿ ವರ್ಷ ಈ ಹಾಸ್ಟೆಲ್ ಸ್ಯೆಯನ್ನು ದಲಿತ ವಿದ್ಯಾರ್ಥಿಗಳು ಎದುರಿಸ ಾಗಿದೆ. ಜೊತೆಗೆ ಇಲ್ಲಿನ ಡಿಪಾರ್ಟ್‌ಮೆಂಟು ಜಾತೀಯತೆಯಿಂದ ತುಂಬಿತುಳುಕು ಈ ಎಲ್ಲದಕ್ಕೂ ಸಂಬಂಧಪಟ್ಟಂತೆ ುಗಳನ್ನು ಹುಡುಕುತ್ತಾ ಹೋದರೆ ಒಂದು ಕವನ್ನೆ ಬರೆಯುವಷ್ಟು ಕತೆ ಸಿಗುತ್ತದೆ. ●

ಮು

ಬೆಲ್ಚಿ ಪಿಪ್ರಾ ತುಂಬಿಕೊಂಡಿರುವ ಮಹಾರಾಜ ಕಾಲೇಜು ಹಾಸ್ಟೆಲ್

ಮೈಸೂರಿನ ಮಹಾರಾಜಾ ಕಾಲೇಜು ಹಾಸ್ಟಲ್ ಇಂಡಿಯಾದ ಜಾತಿ ವ್ಯವಸ್ಥೆಯ ಎಲ್ಲಾ ಕೊಳಕುಗಳನ್ನು ತುಂಬಿಕೊಂಡು ನಿಂತಿದೆ, ಎನ್ನುವುದಕ್ಕೆ ಹೊರಗಡೆ ಬೆಲ್ಚಿ ಪಿಪ್ರಾಗಳು ನಡೆದರೆ ಇಲ್ಲಿ ಪ್ರತಿ ವರುಷ ಒಂದಿಲ್ಲೊಂದು ಕಾರಣಕ್ಕೆ ದಲಿತ ವಿದ್ಯಾರ್ಥಿಗಳ ಮೇಲೆ ನಡೆಯುವ ಹಲ್ಲೆಗಳು ಅವಮಾನಗಳು ಉದಾಹರಣೆಯಾಗುತ್ತವೆ.

ನೋಡಲು ಎರಡು ವಿಭಾಗವಾದಂತೆ ಕಾಣುವ ಹಾಸ್ಟಲು ಒಂದು ಕಡೆ ಹೆಂಚು ಕವುಚಿಕೊಂಡು ಮತ್ತೊಂದು ಕಡೆ ಸಿಮೆಂಟು ತಾರಸಿಯಲ್ಲಿ ಮೆರೆಯುತ್ತಿದೆ. ಹೆಂಚುಗಳ ಕೆಳಗಿನ ರೂಮುಗಳಲ್ಲಿ ಹೊಲೆ ಮಾದಿಗ ವಿದ್ಯಾರ್ಥಿಗಳು ಜೀವ ಕೈಯಲ್ಲಿಡಿದು ಉಸಿರಾಡಿದರೆ ತಾರಸಿ ಬಿಲ್ಡಿಂಗುಗಳಲ್ಲಿ ಮೇಲ್ಜಾತಿ ಹಣವಂತ ವಿದ್ಯಾರ್ಥಿಗಳು ಮೆರೆಯುತ್ತಾರೆ. ಇದ ಕೂಡಿಕೊಂಡು ಎರಡೂ ಕಡೆಗೂ ಬೇರೆ ಬೇರೆ ಸ್ನಾನದ ಮನೆ, ಕಕ್ಕಸ್ಸು, ಆಟದ ಮೈದಾನಗಳು ಇವೆ. ದಲಿತ ವಿದ್ಯಾರ್ಥಿಗಳು ಈ ವಿಭಾಗ ಪದ್ಧತಿಯನ್ನು ಶಿರಸಾ ಪಾಲಿಸಬೇಕು. ಹಾಗೆಂದು ಇದೇನೂ ಲಿಖಿತ ಕಾನೂನಲ್ಲ. ಆದರೆ ಇದು ಆ ಕಾನೂನಿಗಿಂತ ಬಿಗಿಯಾದ ಮೇಲ್ಜಾತಿಯ ದರ್ಪದ ಕಟ್ಟಪ್ಪಣೆ! ಈ ಕಾರಣದಿಂದಲೇ ಈ ವಿಭಾಗ ಪದ್ಧತಿಯನ್ನು ದಲಿತ ವಿದ್ಯಾರ್ಥಿಗಳು ಮೀರಿದರೆ 'ಸಹಜ'ವಾಗೇ ಅವರ ಮೇಲೆ ಹಲ್ಲೆ ಅಥವಾ ಅವಮಾನಗಳು ನಡೆಯುತ್ತವೆ. ಎರಡು ಸ್ಯಾಂಪಲ್ಲು ನೋಡಿ (೧) ಕಳೆದ ವರ್ಷ ಎಲ್ಡರ್ ಕಮಿಟಿ ಮೆಂಬರ್ ಆಗಿದ್ದ ರವಿ ಎಂಬ ದಲಿತ ವಿದ್ಯಾರ್ಥಿ ವೆಜಿಟೇರಿಯನ್ ಮತ್ತು ನಾನ್ ವೆಜಿಟೇರಿಯನ್ ಮೆಸ್‌ಗಳಿಗೆ ಒಬ್ಬೊಬ್ಬ ದಲಿತ ವಿದ್ಯಾರ್ಥಿಗಳನ್ನ ಪ್ರಿಪೆಕ್ಟರಾಗಿ ನೇಮಿಸಿ ಎಂದು ಸಲಹೆ ಮಾಡಿದ್ದಕ್ಕೆ ''ಹೋಲೇರಿಗೆ ಇಲ್ಲಿ ಓಟು ಮಾಡೊ ಹಕ್ಕಿಲ್ಲ''ಇತ್ಯಾದಿ ಅವಮಾನ ಸಿಕ್ಕಿತು. ಅವಮಾನ ಸಹಿಸದೆ ರವಿ ಹಾಸ್ಟೆಲ್ ಬಿಟ್ಟ. (೨) ನಂಜುಂಡಸ್ವಾಮಿ ಎಂಬ ದಲಿತ ವಿದ್ಯಾರ್ಥಿಗೂ ಮೇಲ್ಜಾತಿಯ ಮತ್ತೊಬ್ಬ ವಿದ್ಯಾರ್ಥಿಗೂ ಒಂದು ರೂಮು ಗೊತ್ತಾಗಿತ್ತು. ಇದನ್ನು ತಿಳಿದ ಮೇಲ್ಜಾತಿ ಹುಡುಗರು ನಂಜುಂಡಸ್ವಾಮಿ ಊರಿಗೆ ಹೋಗಿದ್ದಾಗ ಅವನ ಹಾಸಿಗೆ, ಟ್ರಂಕು ಇತ್ಯಾದಿಗಳನ್ನು ತೆಗೆದು ರೂಮಿಂದ ಹೊರಕ್ಕೆ ಬಿಸಾಕಿದ್ದರು. ವಾರ್ಡನ್ ಹತ್ತಿರ ಕಂಪ್ಲೇಂಟು ಮಾಡಿದಾಗ "ನೀವು ಗೆಸ್ಟ್‌ಪಸ್ಟ್ ಅಂತ ಕರ್ಕಂಡು ಬರ್ತೀರಿ ನಿಮಗೆ ಅಲ್ಲೇ ಸರಿ ಹೋಗಿ" ಎಂದರಂತೆ. ಅವಮಾನ ಸಹಿಸದ ಈತನೂ ಹಾಸ್ಟೆಲು ಬಿಟ್ಟ. ಇಂಥ ಅವಮಾನ ಅಥವಾ ಹಲ್ಲೆಗಳು ವಿಶ್ವವಿದ್ಯಾಲಯದ ಕಣ್ಣುಗುಡ್ಡೆಗಳ ಮೇಲೆ ಈ ಹಾಸ್ಟೆಲಿನ ಇತಿಹಾಸದುದ್ದಕ್ಕೂ ನಡೆದಿರುವ ಪರಿಪಾಠ. ಹಿಂದಿನ ವರುಷಗಳನ್ನು ಮರೆತು ಈ ೧೯೮೧-೮೨ ರ ಸಾಲಿನ ಒಂದನ್ನು ನೋಡೋಣ :

ಅಂದು ಬೆಳಿಗ್ಗೆ ಎಲ್ಲ ವಿದ್ಯಾರ್ಥಿಗಳೂ ಸ್ನಾನಕ್ಕೆ ಹೋಗುತ್ತಿದ್ದರು. ದಲಿತ ವಿದ್ಯಾರ್ಥಿಗಳೆಲ್ಲ ಸಾಮಾನ್ಯವಾಗಿ ಕೆಳಗಿನ ಸ್ನಾನದ ಮನೆಯಲ್ಲೇ ಸ್ನಾನಮಾಡುವಾಗ ಒಂದಿಬ್ಬರು ದಲಿತರು ಅದ ಮೀರಿ ಮೇಲಕ್ಕೆ ಹೋದರು. ಕ್ಯೂ ಸಿಸ್ಟಂ ಪ್ರಕಾರ ಸ್ನಾನ ಮಾಡುವುದು ರೂಢಿ. ಆ ಪ್ರಕಾರ ದಲಿತ ವಿದ್ಯಾರ್ಥಿ ಚಿಕ್ಕ ಬಸವಯ್ಯ ಬಾಗಿಲಲ್ಲಿ ಟವಲ್ ಹಾಕಿ ಸ್ನಾನಕ್ಕೆಹೋದರು. ಅಷ್ಟೊತ್ತಿಗೆ ಬಂದ ಮೇಲ್ಜಾತಿಯವನೊಬ್ಬ "ಏ ಬೇಗ ಬಾತೋಲೊ ನಾನು ಅಲ್ಲೇ ಹೋಗ್ಬೇಕು''ಅಂದ ಉತ್ತರ ಬರಲಿಲ್ಲ. ಪುನಃ "ಲೇ ಹೊಲೆಯ ಎಷ್ಟು ಸ್ನಾನ ಮಾಡಿದ್ರೂ ಅಷ್ಟೇನೆ ಬಾಹೊರಕ್ಕೆ"ಎಂದ. ಅಲ್ಲೇ ಸ್ನಾನಕ್ಕೆ ಕಾಯುತ್ತಿದ್ದ ಇನ್ನೊಬ್ಬ ದಲಿತ ವಿದ್ಯಾರ್ಥಿ ಕಮಲೇಶ್ ಇದ ಕೇಳಿ "ಲೋ ಜಾತಿ

ಎಸ್. ತುಕಾರಾಂ

ಗೀತಿ ಅಂತ ಮಾತಾಡ್ಬೇಡ, ಸ್ವಲ್ಪ ಹಲ್ಲಿಡಿದು ಮಾತಾಡು"ಎಂದ. ಅಷ್ಟರಲ್ಲಿ ಗುಂಪು ಸೇರ್ತು. ಮೇಲ್ಜಾತಿಯವರು ಒಂದಾಗಿ "ಕತ್ತಿಡಿದು ಆಚೆ ನೂಕ್ರೊ ಅವನ್ನ" ಎಂದರು.

ಗಲಾಟೆ ಸುರುವಾಗಿ ಮೇಲ್ಜಾತಿ ವಿದ್ಯಾರ್ಥಿಯೊಬ್ಬನ ಷರ್ಟು ಹರಿದು ಅಷ್ಟಕ್ಕೆ ನಿಂತಿತು ಆದರೆ ಮೇಲ್ಜಾತಿ ವಿದ್ಯಾರ್ಥಿಗಳು ಇದನ್ನು ಅಷ್ಟಕ್ಕೇ ನಿಲ್ಲಿಸದೆ ಅದೇ ದಿನ ಸಂಜೆ ದಲಿತ ವಿದ್ಯಾರ್ಥಿಗಳ ಮೇಲೆ ಹಲ್ಲೆಗಾಗಿ ಊಟದ ಮನೆಯಲ್ಲಿ ಗುಂಪಾಗಿ ಕಾಯುತ್ತಾ ಮೇಲೆ ಬಿದ್ದರು. ಇವರು ಅವರಿಗೆ ಅವರು ಇವರಿಗೆ ಹೊಡೆಯುವುದು ಚಚ್ಚುವುದು ನಡೆಯಿತು. ನಿಚಾಯಿಸಿಕೊಂಡೇ ಇದ್ದ ದಲಿತ ವಿದ್ಯಾರ್ಥಿಗಳು ಮೇಲ್ಜಾತಿ ವಿದ್ಯಾರ್ಥಿಗಳಿಗೆ ಚನ್ನಾಗಿಯೇ ತದಕಿದ್ದರಿಂದ ಆ ಕಡೆಯ ಒಬ್ಬ ಆಸ್ಪತ್ರೆ ಸೇರಬೇಕಾಯಿತು. ದಲಿತರ ಮೇಲಿನ ಸತತ ಹಲ್ಲೆಗಳ ಇತಿಹಾಸ ಕೊಂಚ ಎಡವಿ ನಿಂತಿತ್ತು.

ಸರಿ ಬೆಳಿಗ್ಗೆ ಪೋಲೀಸ್ ವ್ಯಾನಿನೊಂದಿಗೆ ಸಬ್ ಇನ್ಸ್‌ಪೆಕ್ಟರ್, ವಿದ್ಯಾರ್ಥಿ ಕ್ಷೇಮ ಪಾಲಕರು, ರಿಜಿಸ್ಟ್ರಾರ್‌ವರು, ಹಾಸ್ಟೆಲ್‌ಅಧ್ಯಕ್ಷರೂ ಎಲ್ಲರೂ ಬಂದಿಳಿದು "ಸ್ನಾನದ ವಿಷಯಕ್ಕೆ ನೀವು ಯಾಕ್ರಿ ಇಷ್ಟು ಹೊಡಿಬೇಕು?'' ಎಂದು ದಲಿತ

(12 ನೇ ಪುಟ ನೋಡಿ)

ಕೊಲೆಗಡುಕ ಕೃಷ್ಣೇಗೌಡದ ಆಳದ

**ಬಡ ಕುಂಬಾರ ಶೇಷಗಿರಿಯಪ್ಪನನ್ನು ಕೊಂದು ಈಗ ಜೀವಾವಧಿ ಶಿಕ್ಷೆ ಅನುಭ
ತ್ತಿರುವ ಹುಣಸಿಕೋಟೆಯ ಕ್ರೂರ ಜಮೀನುದಾರ ಕೃಷ್ಣೇಗೌಡನ ತೊ
ಕ್ರೌರ್ಯಗಳ ನಡುವೆ ದಿಗ್ ಭ್ರಮೆಯಲ್ಲಿ ಬೆಳೆದು, ಕಲಿತು ಉಸಿರಾಡುತ್ತಿರುವ
ಯುವಕ ವೆಂಕಟೇಶಪ್ಪ ತಾನು ಕಂಡುಂಡ ನೋವನ್ನು ಇಲ್ಲಿ ಹರಡಿದ್ದಾರೆ.**

ಕೊಲೆಗಡುಕ ಕೃಷ್ಣೆಗೌಡನಿಂದ ರಾಷ್ಟ್ರಾದ್ಯಂತ
ಮನೆಮಾತಾದ ಹುಣಸಿಕೋಟೆ ನನ್ನ ಊರು.
ನಾನಿನ್ನು ಪ್ರೈಮರಿ ಸ್ಕೂಲು ಓದುತ್ತಾ ಇದ್ದ
ಕಾಲ. ನಮ್ಮಪ್ಪ ನಮ್ಮಮ್ಮ ಕೃಷ್ಣೇಗೌಡನ
ಮನೆ ಮುಂದೆ ನಾಯಿಗಳಂತೆ ಬಿದ್ದಿದ್ದ ಕಾಲ.
ನನ್ನನ್ನು ವಿದ್ಯಾರ್ಥಿಯಾಗಿ ಮಾಡಲು ಇವರು
ಕೃಷ್ಣೇಗೌಡನ ಮನೆಯಲ್ಲಿ ಜೀತಮಾಡಿ, ನನ್ನ
ನ್ನು ಸ್ಕೂಲಿಗೆ ಕಳಿಸುತ್ತಿದ್ದರು.

ಹಣೆ ಬರಹ !

ಒಂದು ದಿನ ಸ್ಕೂಲಿನಲ್ಲಿ ಸ್ಲೇಟು ಹೊಡೆದು
ಕೊಂಡು ಗೌಡರ ಮನೆಗೆ ಬಂದೆ. R. ಕೃಷ್ಣೇ
ಗೌಡನು ನನ್ನನ್ನು ಥಳಿಸಿ "ನೀನು ವಲೇರ ಮಗ,
ನಿನಗೆ ಎಷ್ಟು ತಿಕ ಕೊಬ್ಬು ಸ್ಲೇಟು ಹೊಡ
ಕೊಂಡು ಮನೆಗೆ ಬಂದಿದ್ದೀಯಲ್ಲ; ನಿಮ್ಮ
ಜಾತಿಗೆ ಈ ರೀತಿ ಮಾಡಿದರೆ ಸರಿಯಿಲ್ಲ, ನಮ್ಮ
ಮನೆಯಲ್ಲಿ ಎಮ್ಮೆ ಮೇಯಿಸಿಕೊಂಡು ಬಿದ್ದಿರು
ವುದೇ ನಿಮ್ಮ ಅಣೆಬರಹ" ಎಂದು ಬಾಯಿಗೆ
ಬಂದ ಮಾತುಗಳನ್ನು ಬೈದ. ಇದನ್ನು ಕೇಳಿ
ನಾನು ತುಂಬಾ ಭಯ ಬೀತಿಯಿಂದ ಗೌಡರು
ಹೇಳಿದಂಗೇ ಅವರ ಮನೆ ಮುಂದೆ ಸಗಣಿ ಎತ್ತು
ವುದು, ಹುಲ್ಲು ತರುವುದು, ಎಮ್ಮೆ ಮೇಯಿ
ಸುವುದು– ಇದೇ ನನ್ನ ಕೆಲಸವಾಯಿತು. ಅವನ
ಅಣ್ಣನ ಮಕ್ಕಳು ಮಾತ್ರ ಪುಸ್ತಕಗಳನ್ನು ಹರಿ
ದುಕೊಂಡು ಬಂದರೂ ಸಹ, ಬೇರೆಯವರನ್ನು
ಬೈದರೂ ಸಹ ಅವರನ್ನು ಸ್ಕೂಲಿಗೆ ಕಳುಹಿಸುತ್ತಿ
ದ್ದನು. ಒಂದು ದಿವಸ ಗೌಡನ ಮಗನು 'ಈ
ಎಮ್ಮೆ ಮೇಯಿಸುವ ಹುಡುಗನನ್ನೂ ಸ್ಕೂಲಿಗೆ
ಕಳಿಸು" ಎಂದು ನನ್ನನ್ನು ಕರೆದುಕೊಂಡು ಹೋಗಿ
ಗೌಡನನ್ನು ಕೇಳಿದನು. ಆಗ ಆ ಗೌಡನ ಗತ್ತು
"ಏ....ನೀನು ತಿಕ ಮುಚ್ಕಂಡು ಸ್ಕೂಲಿಗೆ
ಹೋಗು, ಇಲ್ಲದಿದ್ದರೆ ನೀನು ಸಹ ಎಮ್ಮೆಗಳಿಗೆ
ಹೋಗು; ಆ ನನ್ನ ವಲೇರ ಮಕ್ಕಳನ್ನೆಲ್ಲ
ಸ್ಕೂಲಿಗೆ ಕಳಿಸಿದ್ರೆ ನನ್ನ ಮಕ್ಳು ನಾಳೆ ಒಂದು
ದಿವಸ ನಮ್ಮ ಮೇಲೇ ಕತ್ತಿ ಮಸೆಯುತ್ತಾರೆ"
ಎಂದು ಬೈದನು. ಆಗ ಆ ಹುಡುಗನು ಶಾಲೆಗೆ
ಹೊರಟುಹೋದನು. ಆಗ ನನಗೆ ತುಂಬಾ ಅಳು
ವು ಉಕ್ಕಿ ಬಂದಿತು. ಆ ದಿವಸ ರಾತ್ರಿ ನಮ್ಮ
ತಂದೆ ತಾಯಿಗೆ ನಡೆದ ವಿಷಯ ಹೇಳಿದೆ. ಅವರು
ನೀನು ಸ್ಕೂಲಿಗೆ ಹೋಗು ಎಂದು ಹೇಳಿದರು.
ಆಗ ನನಗೆ ತುಂಬಾ ಸಂತೋಷವಾಯಿತು.

ಅನ್ನಕೊಟ್ಟ ಮನೆಗೆ ಕನ್ನ !

ನಮ್ಮ ಹರಿಜನರ ಕಾಲೋನಿಗೆಲ್ಲಾ ನಾ
ನೊಬ್ಬ ಮಾತ್ರ ಸ್ಕೂಲಿಗೆ ಹೋಗುತ್ತಿದ್ದೆ. ಆ
ಸ್ಕೂಲಿನಲ್ಲಿ ಒಬ್ಬ ಟೀಚರ್ ಇದ್ದರು. ಆ
ಟೀಚರ್ ಮಗನೂ ಸಹ ನನ್ನ ಜೊತೆಯಲ್ಲಿ
ಸ್ಕೂಲಿಗೆ ಬರುತ್ತಿದ್ದನು. ಅವನಿಗೆ ಏನುಬೇಕಾ
ದರೂ ತಂದುಕೊಡುವುದು ಮತ್ತು ಅವನು ಎಲ್ಲಿಗೆ
ಹೋದರೆ ಅಲ್ಲಿಗೆ ಅವನ ಹಿಂದೆ ಹೋಗುವುದೇ
ನನ್ನ ಕೆಲಸವಾಗಿತ್ತು. ಅವನ ಜೊತೆಯಲ್ಲಿ
ಹೋಗದೆ ಇದ್ದರೆ ಟೀಚರ್ ನನ್ನನ್ನು ಸ್ಕೂಲಿನ
ಬಾಗಿಲಲ್ಲಿ ನಿಲ್ಲಿಸಿ ಪಾಠ ಹೇಳಿಕೊಡುತ್ತಿದ್ದಳು.
ತೋಟದಲ್ಲಿ ತೆಂಗಿನ ಗಿಡಗಳಿಗೆ ನೀರು ಹಾಕಲು
ಕಳುಹಿಸುತ್ತಿದ್ದಳು. ಇದನ್ನೆಲ್ಲ ನೋಡಿ ನನಗೆ
ತುಂಬಾ ನೋವಾಯಿತು. ಒಂದು ದಿನ ನಮ್ಮ
ತಾಯಿ ಬಂದು ಕೇಳಿದ್ದಕ್ಕೆ; ನಿಮ್ಮ ಜಾತಿಗೆ
ಎಷ್ಟು ಸಹಾಯ ಮಾಡಿದರೂ ಉದ್ಧಾರವಾಗುವು
ದಿಲ್ಲ, ನಿನ್ನ ಮಗ ಓದಿ ನಿಮಗೆಲ್ಲ ಇನ್ನೇನು
ಸಂಬಳ ತಂದುಕೊಡುವುದೇ ಬಾಕಿ ಎಂದು ಬೈದು,
ನಿನ್ನ ಮಗನು ಓದುವುದಿಲ್ಲ, ಬರೆಯುವುದಿಲ್ಲ
ಮತ್ತೆ ನಿಮ್ಮ ಮನೆಯಲ್ಲಿ ತಿನ್ನುವುದಕ್ಕೆ ಅನ್ನ
ಸಹ ಇಲ್ಲ, ನಿನ್ನ ಮಗನನ್ನು ನಮ್ಮ ಮನೆಯಲ್ಲಿ
ಸಂಬಳಕ್ಕೆ ಇಟ್ಟುಕೊಂಡು ಓದಿಸುತ್ತೇನೆಂದು
ಹೇಳಿದಳು. ಇಲ್ಲದಿದ್ದರೆ ನಿನ್ನ ಮಗನನ್ನು ನಮ್ಮ
ಸ್ಕೂಲಿಗೆ ಕಳಿಸುವುದೇ ಬೇಡ ಎಂದು ಹೇಳಿದಳು.
ನಮ್ಮ ತಾಯಿ ಒಪ್ಪಿದಳು. ಆಗ ಆ ಟೀಚರ್
ಅವರ ಮನೆಗೆ ಕರೆದುಕೊಂಡು ಹೋಗಿ ಒಂದು
ಹಳೇ ಗೋಣಿಚೀಲ ಮತ್ತು ಹರಿದುಹೋದ
ಬಟ್ಟೆಯನ್ನು ಕೊಟ್ಟು ಅವರ ಮನೆ ಮುಂದೆ ದನ
ಕಟ್ಟುವ ಮನೆಯಲ್ಲಿ ಮಲಗು ಎಂದು ಹೇಳುತ್ತಿ
ದ್ದಳು. ಅಲ್ಲಿ ಮಲಗಿರುವಾಗ ಸೊಳ್ಳೆಗಳ ಮತ್ತು
ನಾಯಿಗಳ ಕಾಟ ಇದ್ದುದರಿಂದ ನಿದ್ದೆಯೇ ಬರು
ತ್ತಿರಲಿಲ್ಲ. ಹೇಗೊ ೫ನೇ ತರಗತಿವರೆಗೂ ಅವರ
ಮನೆಯಲ್ಲಿಯೇ ಓದಿಕೊಂಡು ಇದ್ದೆ. ಒಂದು
ದಿವಸ ಅವರೆಲ್ಲರು ಕಾಫಿ ಕುಡಿಯುತ್ತಿದ್ದರು.
ನಾನು ಕಾಫಿಯನ್ನು ಕೇಳಿದೆ. ಅವರು ಕುಡಿದ
ಗ್ಲಾಸಿನಲ್ಲಿ ಉಳಿದ ಕಾಫಿ ನೀರನ್ನು ತಂದು ಹಾಕಿ
ದರು. ನನಗೆ ಬಹಳ ಕೋಪ ಬಂದಿತು. ಆಗ
ನಾನು "ನಿಮ್ಮ ಮನೆಯಲ್ಲಿ ಕೆಲಸ ಮಾಡಿ
ಕೊಂಡು ದನಗಳ ಕೊಠಡಿಯಲ್ಲಿ ಬಿದ್ದಿರುವುದಕ್ಕೆ
ಈ ಎಂಜಲು ಕಾಫಿ ಕೊಟ್ಟಿದ್ದೀರಾ" ಎಂದು
ಕೇಳಿದೆ. ಅದಕ್ಕೆ ಆ ಟೀಚರ್ ಮನೆಯವರೆಲ್ಲಾ
ಸೇರಿಕೊಂಡು ಅವರ ದನಗಳ ಕೊಠಡಿಯ
ಕಂಬಕ್ಕೆ ಕಟ್ಟಿಹಾಕಿ ಬಾಯಿಗೆ ಬಂದಂತೆ ಬೈದರು
ಮತ್ತು ಮೈಲೆ ಹರಕು ಚಿಂದಿಯಿಂದ ಕೂಡಿದ
ಬಟ್ಟೆಯಿತ್ತು, ಅದನ್ನು ಸಹ ಕಿತ್ತುಕೊಂಡು
ಗಾಯಗಳಾಗುವ ರೀತಿ ಹೊಡೆದು ಮನೆಗೆ ಕಳಿ
ಸಿದರು. ಆಗ ನಮ್ಮ ತಾಯಿ ಬಂದು ಕೇಳಿದ್ದಕ್ಕೆ,
ನಿಮ್ಮ ಮಗನು ಕೀಳು ಜಾತಿಯಾಗಿ ಹುಟ್ಟಿದ್ದು
ಶ್ರೀಮಂತರ ಮಕ್ಕಳಂತೆ ವರ್ತಿಸುತ್ತಾನೆಂದು,
ಮಾತನಾಡುವುದರಲ್ಲಿ ತಲೆಹರಟೆ ಮಾಡಿ
ಅಲ್ಲದೆ ನಮ್ಮ ಮನೆಯೊಳಗೆ ಬಂದು ಸ
ಸಮಯದಲ್ಲಿ ನೀರು ತೆಗೆದುಕೊಂಡು ಹೋ
ದ್ದನೆಂದೂ ಆದ್ದರಿಂದ ನಾವು ಹೊಡೆದೆವು
ಹೇಳಿದರು. ಆಗ ನನ್ನ ತಾಯಿ ಅವರು
ಮಾತನ್ನು ನಂಬಿ ನನ್ನನ್ನೇ ಥಳಿಸಿದರು.
ಕೊಟ್ಟ ಮನೆಗೆ ಕನ್ನಹಾಕುವ ಬುದ್ಧಿ ನಿ
ಎಂದು ಬೈದು ಕರೆದುಕೊಂಡು ಮನೆಗೆ
ರು. ಆ ವರ್ಷ ೫ನೇ ತರಗತಿ ಉತ್ತೀರ್ಣ

ಎಡೆ ಎತ್ತಿದ ಕೋಪ

೬ನೇ ತರಗತಿ ಸೇರುವಷ್ಟರಲ್ಲಿ ನಮ್ಮ
ನನ್ನು ಕೃಷ್ಣೇಗೌಡ ಜೀತಕ್ಕಿಟ್ಟುಕೊಂ



ವೆಂಕಟೇಶಪ್ಪ ಹುಣಸಿಕೋಟೆ
ಎರಡನೇ ಪಿ.ಯು.ಸಿ

ಕೃಷ್ಣೇಗೌಡನ ಅಣ್ಣ ತಮ್ಮಂದಿರು ನಮ್ಮ ಅ
ಮೇಲೆ ಅಸೂಯೆ ಇಟ್ಟುಕೊಂಡು ಗೌಡನ
ಬಿಡಿಸಲು ಹಲವು ಉಪಾಯಗಳನ್ನು ಹ
ದರು. ಆ ಸಮಯದಲ್ಲಿ ಗೌಡನ ಮನೆಯ
ನಮ್ಮಣ್ಣ ಗೌಡನ ಹೆಂಡತಿಯನ್ನು ಒಲಿಸಿಕೆ
ದ್ದಾನೆಂದು ಅವನನ್ನು ಹಿಡಿದು ಒಂದು ವ
ಕಟ್ಟಿಹಾಕಿ ಥಳಿಸಿದ್ದಲ್ಲದೆ ಮಾರನೆಯ
ರಾತ್ರಿ ಪಕ್ಕದ ಹಳ್ಳಿಯಲ್ಲಿ ನಾಟಕವನ್ನು ನ
ಲು ನಮ್ಮ ಅಣ್ಣ ಹೋಗುತ್ತಿದ್ದಾಗ ಗ
ಗೂಂಡಾಗಳು ತಲೆ ಕತ್ತರಿಸಲು ಒಂದು ಬ
ಹತ್ತಿರ ಕಾದುಕೊಂಡು ಇದ್ದರು. ಆದರೆ
ಅಣ್ಣ ಆ ಬೆಟ್ಟಗಳ ಮಧ್ಯೆ ತಪ್ಪಿಸಿಕೊ
ನಾಟಕವನ್ನು ನೋಡಿಕೊಂಡು ಬಂದು
ಗೌಡನ ದನಗಳ ಮನೆಯಲ್ಲಿ ಮಲಗಿದ್ದನು.
ಕೃಷ್ಣೇಗೌಡನ ಅಣ್ಣ ಇವನು ಮಲಗಿದ್ದು
ನೋಡಿ "ಏ ಕೃಷ್ಣ ಆ ವಲೇರ ನನ ಮಗನ
ತಪ್ಪಿಸಿಕೊಂಡು ದನಗಳ ಮನೆಯಲ್ಲಿ
ದ್ದಾನೆ" ಎಂದು ಹೇಳಿದ. ಗೌಡನು ಆ ಮಾ
ಕೇಳಿದ ತಕ್ಷಣ ಗಾಬರಿಯಿಂದ ಎದ್ದು

ಾನಿ ಕೋಟೆ ಒಳಗೆ

ಂದಿರಿಬ್ಬರು ಈ ವಿಷಯವನ್ನು ಮಾತ
ತ್ತಿರುವಾಗ ಕೃಷ್ಣೇಗೌಡನ ಹೆಂಡತಿ ಇದ
ನ್ನು ಕೇಳಿಸಿಕೊಂಡು ತನ್ನಿಂದ ಈತನ ಪ್ರಾಣ
ಗುತ್ತದೆ ಎಂದು ಮಾರನೆಯ ದಿವಸ ನಮ್ಮ
ನ ಜೊತೆಗೂಡಿ ಇಬ್ಬರೂ ಕಾಣೆಯಾದರು.
ನ್ನು ತಿಳಿದ R.K. ಗೌಡನ ಕೋಪ ನಾಗರ
ನಂತೆ ಹೆಡೆ ಎತ್ತಿಕೊಂಡು ನಮ್ಮ ಮನೆಯ
ಹಾರಾಡತೊಡಗಿತು.

ನೀರೆ ಗತಿ

ರರು ಕಾಣೆಯಾದ ಮೇಲೆ ನಮ್ಮ ಮನೆ
ನ್ನು ಸರ್ಕಾರಿ ಬಾವಿಯಲ್ಲಿ ನೀರು ಎತ್ತಿಸು
ಲ್ಲ. ಬೇರೆ ದಾರಿಗಳಲ್ಲಿ ಓಡಾಡುವುದಕ್ಕೆ
ರರೆ ಗೌಡರ ಗತ್ತು, ಕೇಳಿ ಮೈಯೆಲ್ಲಾ
ದಂತೆ ಭಯಭೀತರಾಗಿ ಆಚೆ ಈಚೆ ನಮ್ಮ
ಯುವರು ಬರುತ್ತಿರಲಿಲ್ಲ. ಆಗ ನಾನು ಚಿಕ್ಕ
ದ್ದರಿಂದ ಮಳೆ ಬೀಳುವಾಗ ನನಗೆ ಒಂದು
ರ್ ಮತ್ತು ಒಂದು ಬಿಳಿಯ ಬಟ್ಟೆ ಕೊಟ್ಟು
ಲ್ಲಿಸುತ್ತಿದ್ದರು. ಬೀಳುವ ಮಳೆ ನೀರನ್ನು
ಸಿ ಎತ್ತಿಕೊಂಡು ಮನೆಯಲ್ಲಿಡುತ್ತಿದ್ದೆ.

ಳಂತೆ ದಿಕ್ಕಾಪಾಲು

ೋಡ ಮುಸುಕಿನಿಂದ ಕೂಡಿದ ಆಟ್ಟಹಗಲು
ಸುವಾರ ಮಳೆ ಬಿದ್ದು ನೀರು ಹರಿಯು
. ಆ ಸಮಯದಲ್ಲಿ ಊರಿನವರೆಲ್ಲ ಒಂದಾ
ಮ್ಮ ಮನೆಯ ಹತ್ತಿರ ಬಂದರು. ಆಗ
ಮನೆಯವರಿಗೆ ಕಣ್ಣಿನ ಮುಂದೆ ಸಿಡಿಲು
ಗೆ ಮನೆಯೊಳಗೆ ಗುಡುಗು ಮಿಂಚು ಹಾಕಿ
ಆಯಿತು. ಎಲ್ಲರು ನಡುಗುತ್ತಾ ಮನೆ
ಗೆ ಸೇರಿಕೊಂಡೆವು. ಕೃಷ್ಣೇಗೌಡ ರಾಜ
ಮನೆಯ ಮುಂದೆ ನಿಂತುಕೊಂಡು ಹರಿ
ಕಾಲೋನಿಯಲ್ಲಿದ್ದವರನ್ನೆಲ್ಲ ಕೂಗಿದ.
ವೆ ದೊಣ್ಣೆ, ಮಚ್ಚು ಕಲ್ಲುಗಳಿಂದ ಊರಿ
ಲ್ಲ ಬಂದು ನಮ್ಮ ಮನೆಯ ಸುತ್ತಾ ನಿಂತು
ತರು. ಆಗ ರೋಷದಿಂದ ಮನೆಯೊಳಕ್ಕೆ
ದನಗಳು ಮತ್ತು ಕುರಿಗಳು ಮನೆಯಲ್ಲಿ
ಸಾಮಾನುಗಳು ತೆಗೆದು ಈಚೆ ಎಸೆಯ
ಿದನು. ಊರಿನ ಜನರೆಲ್ಲ ಆ ಸಾಮಾನು
ನ್ನು ಎತ್ತಿಕೊಂಡು ಊರಿನ ಮುಂದೆ ಹರಾಜು
ಕೊಂಡರು. ಒಬ್ಬೊಬ್ಬರು ಒಂದೊಂದು
ಾನು ತೆಗೆದುಕೊಂಡು ಹೋಗುತ್ತಿದ್ದರು.
ನಮ್ಮ ಮನೆಯವರು ಕೇಳಿದ್ದಕ್ಕೆ ಊರಿನ
ತಿ ಕಂಬಕ್ಕೆ ಕಟ್ಟಿಹಾಕಿ ಎಲ್ಲರ ಮುಂದೆ
ತಂದೆ ತಾಯಿ ಮತ್ತು ಇನ್ನೊಬ್ಬ
ನನ್ನು ಥಳಿಸಿದರು. ಇದನ್ನು ಪೋಲೀಸು
ಕಂಪ್ಲೇಟು ಮಾಡಿದರೂ ಸಹ ಅಲ್ಲಿನ
ೀಸ್ ಅಧಿಕಾರಿಗಳು ಅಂತ ದೊಡ್ಡ ಮನು
ಮೇಲೆ ಇಂಥ 'ಲುಚ್ಚ' ನನ ಮಕ್ಕು
ಂಟು ಮಾಡಿದರೆ ಯಾವ ಲೆಕ್ಕ ಎಂದು
ಹೇಳಿ ಆಚೆಗೆ ನೂಕಿದರು. ಇದನ್ನೆಲ್ಲ ನೋಡಿದ ನಮ್ಮಣ್ಣ ಅಂದರೆ ಮನೆಯಲ್ಲಿಯೇ ಇದ್ದ ಅಣ್ಣ ವಿಷ ಕುಡಿದುಬಿಟ್ಟ. ಆಗ ಊರಿನಲ್ಲಿ ಯಾರೊ ಒಬ್ಬ ವ್ಯಕ್ತಿ ಸಹಾಯಕ್ಕೆ ಬಂದಿದ್ದಕ್ಕೆ ಅವನನ್ನು ಚಾವಡಿ ಕಂಬಕ್ಕೆ ಕಟ್ಟಿಹಾಕಿಸಿ ಅವನ ಮನೆಯೊಳಗಿದ್ದ ದನಕುರಿಗಳನ್ನು ಹೊಡೆದುಕೊಂಡು ಹೋಗಿ ಮಾರಿಕೊಂಡರು. ಆ ಸಮಯದಲ್ಲಿಎಲ್ಲಿ ನೋಡಿದರೂ ಊರಿನ ತೋಟ ತಳವಾರರು ದಾರಿ ಮತ್ತು ಬಾವಿಗಳಿಗೆ ಕಾವಲು ಇದ್ದರು. ಹೀಗೆ ಇರುವಾಗ ಇದ್ದಕ್ಕಿದ್ದಂತೆ ನನ್ನ ಅಣ್ಣ ತೀರಿಕೊಂಡ. ಆಗ ನಮ್ಮ ಮನೆಯವರೆಲ್ಲ ಹಕ್ಕಿಗಳ ಹಾಗೆ ದಿಕ್ಕಾಪಾಲಾದೆವು. ಆಗ ನಾನು ಸ್ಕೂಲನ್ನು ಬಿಟ್ಟುಬಿಟ್ಟೆ. ನಮ್ಮ ತಂದೆ ತಾಯಿಯನ್ನೂ ಸಹ ಊರಿನಿಂದ ಓಡಿಸಿಬಿಟ್ಟರು.

ಎಲ್ಲಿ ನೋಡಿದರೂ ಗತ್ತು

ಹಾಗೂ ಹೀಗೂ ಒಂದು ವರ್ಷ ಬೇರೆ ಹಳ್ಳಿಯಲ್ಲಿ ಕಾಲ ತಳ್ಳಿ ತಿರುಗಿ ನಮ್ಮ ಹಳ್ಳಿಗೆ ಬಂದೆವು. ನಾನು ೬ನೇ ತರಗತಿಗೆ ಸೇರಿದೆ. ಆಗ ನಮ್ಮ ತಂದೆಯೂ ಸಹ ಕಾಯಿಲೆಯಿಂದ ಬಳಲಿ ಆ ವರ್ಷದ ಮಧ್ಯದಲ್ಲಿ ತೀರಿಕೊಂಡರು. ಆಗ ನಮಗೆ ಯಾರೂ ಆ ಊರಿನಲ್ಲಿ ಕೂಲಿಗೆ ಕರೆಯುತ್ತಿರಲಿಲ್ಲ. ಕರೆದರೆ ಕೃಷ್ಣೇಗೌಡ ೫೦ ರೂ ದಂಡ ಹಾಕುತ್ತಿದ್ದನು. ನಾನು ೬ನೇ ತರಗತಿ ಉತ್ತೀರ್ಣನಾದೆ. ನಮ್ಮ ತಾಯಿ ಒಬ್ಬಳೇ ನನಗೆ ದಿಕ್ಕು. ಹಾಗೂ ಹೀಗೂ ೭ನೇ ತರಗತಿ ಉತ್ತೀರ್ಣನಾಗಿ ಮಿಡ್ಲ್‌ಸ್ಕೂಲಿಂದ ಹೈಸ್ಕೂಲಿಗೆ ಬಂದೆ. ಮತ್ತೆ ಕೃಷ್ಣೇಗೌಡನ ಕಣ್ಣು ನನ್ನ ಮೇಲೆ ಬಿತ್ತು. ಆದರೂ ಸಹಕಷ್ಟಪಟ್ಟು ೮ನೇ ತರಗತಿಗೆ ಸೇರಿ ಹಾಸ್ಟಲ್ ಸೇರಿದೆ. ಮತ್ತು ನಾನು ೮ನೇ ತರಗತಿ ಮುಗಿಸಿ ೯ಕ್ಕೆ ಬರುವಷ್ಟರಲ್ಲಿ ಕೃಷ್ಣೇಗೌಡ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿ 'ಐ' ಕಾಂಗ್ರೆಸ್‌ನಲ್ಲಿ ಆಯ್ಕೆಯಾದನು. ಆಗ ಅವನಿಗೆ ಇನ್ನೂ ಹೆಚ್ಚಿನ ಕಣ್ಣು ನನ್ನ ಮೇಲೆ ಬಿತ್ತು. ೯ನೇ ತರಗತಿ ಉತ್ತೀರ್ಣನಾಗಿ S.S.L.C. ಹಾಸ್ಟಲಿಗೆ ಸೇರುವಷ್ಟರಲ್ಲಿ ಇವನನ್ನು ಹಾಸ್ಟಲಿಗೆ ಸೇರಿಸಬಾರದೆಂದು ಆಜ್ಞೆ ಮಾಡಿದನು. ಇವನು ಅಡಿಗೆಯವರಿಗೆ ಚಾಕು ತೋರಿಸುತ್ತಾನೆಂದು ಸುಳ್ಳು ಆಪಾದನೆ ಹೊರಿಸಿ ಹಾಸ್ಟಲಿಗೆ ಸೇರಲು ತೊಂದರೆ ಮಾಡಿದ. ಈ ಗೌಡರ ಗತ್ತು ಈ ಹಳ್ಳಿಗಳಲ್ಲಿ ಎಲ್ಲಿ ನೋಡಿದರೂ ಇತ್ತು. ಇದೇ ರೀತಿ ಇರುತ್ತದೆ ಎಂದು ಬಡವನಾದ ಶೇಷಗಿರಿಯಪ್ಪನ ಕೊಲೆ ಮಾಡಿ ರಾಜಾರೋಷವಾಗಿ ಜಾಮೀನಿನ ಮೇಲೆ ಬಿಡುಗಡೆಯಾದನು.

ಜೈಲಿನಲ್ಲಿ ಕೃಷ್ಣೆಗೌಡ

ಮುಂದೆ ನಡೆದದ್ದು ಎಲ್ಲರಿಗೂ ಗೊತ್ತಿದೆ. ದಲಿತ ಸಂಘರ್ಷ ಸಮಿತಿಯ ಹೋರಾಟದಿಂದ, ನ್ಯಾಯಾಧೀಶ ಶ್ರೀ ಸೋಮಶೇಖರ್ ಅವರ ಪ್ರಾಮಾಣಿಕ ತೀರ್ಪಿನಿಂದ ಕೃಷ್ಣೇಗೌಡ ಜೀವಾವಧಿ ಶಿಕ್ಷೆಯ ಜೈಲು ಸೇರಿದ್ದಾನೆ. ಜೈಲಿನೊಳಗಿನ ಕೃಷ್ಣೇಗೌಡನನ್ನು ಮನಸ್ಸಲ್ಲಿ ಚಿತ್ರಿಸಿಕೊಳ್ಳುತ್ತಾ, ನಾನು ಈಗ ಎರಡನೆ ಪಿ.ಯು.ಸಿ ಯಲ್ಲಿದ್ದೇನೆ. ●

ಕಪ್ಪು ಕಲೆ

ಪಿಸು ಪಿಸು ಮಾತು ಹರಡುತಿದೆ
ಬಾಯಿಂದ ಬಾಯಿಗೆ
ಗಾಳಿಯ ಅಲೆಯಂತೆ
ನನ್ನ ತೋಳ ಸಂದಿಗಳಲಿ
ಅಂಗೈ ಅಗಲದ ಮಚ್ಚೆ
ಇದೆ ಇದೆ ಇದೆ
ಯಾವ ತಾತನ ಕಾಲದಿಂದ ಉಳಿದು
ಬಂದ ಬಳುವಳಿಯೊ
ಅಪ್ಪ ಅಮ್ಮನಿಗೂ ಇತ್ತಂತೆ
ನಿಸರ್ಗದ ಬರೆ ಎಳೆದ ಗಾಯ
ನೆನಪುಗಳ ಆಳ ಆಳವ
ತಿಣುಕಿದರೂ
ನಾ ಕಂಡುದಿಲ್ಲ ಮುಟ್ಟಿ ನೋಡಿದು ದಿಲ್ಲ
ಆದರೂ
ಅಂಬೆಗಾಲಿಡುವಂದಿನಿಂದ
ಮೇಲೇರಿದ ಹುಬ್ಬುಗಳ ಅಸಹ್ಯ ನೋಟಗಳ
ಹೊಡೆತದಿಂದ ಬಚ್ಚಿಟ್ಟುಕೊಳ್ಳುವುದ ಕಲಿತೆ
ಹರಕು ಚಿಂದಿಗಳಲಿ ಸುತ್ತಿಟ್ಟ ಮೈಯ
ಹೆಪ್ಪುಗಟ್ಟುವ ಕತ್ತಲ ತಿಂಗಳುಗಳಲಿ,
ವರ್ಷಗಳಲಿ
ಬಚ್ಚಿಡುವ–ತೆವಳಿಸುವ ಬದುಕ
ಯಾಕಿತ್ತೆಯೋ ?
ಆ ಮರೆ ಮುಸುಕು ಚಿಂದಿಗಳಲಿ
ಅವಿತಿಟ್ಟದ್ದೆ
ನನ್ನ ಗುಂಡಿಗೆಯ ಮತ್ತೆ ನೋಡಿದರೆ
ಗುಂಡಿಗೆಯಲ್ಲೆಲ್ಲ ಗಾಯ, ಕೆಂಪು ಓಕುಳಿ
ಹೊಲೆಯೆಂಬ ಸುಡುಮುದ್ರೆ
ಬಿಡಲಿಲ್ಲ ನನ್ನ
ನನ್ನ ಹಾಡುಗಳು ಸಾಯುವುವು ಸುಳ್ಳುಗಳಾಗಿ
ನೋವುಗಳ ಕೀವುಗಳ ಸುರುಳಿಯಲಿ ಸಿಲುಕಿ
ಒಳಗುದಿಯ ಜ್ವಾಲೆ
ಏರುವುದು ಮೇಲೆ ಮೇಲೆ
ಯಾರು ಹಾಕಿದರಪ್ಪ ನನಗೀ ಬರೆಗಳನು
ನಾ ಮಾಡಿದ ತಪ್ಪಾವುದು ಅರಿಯೆದೇವ
ನನ್ನ ತನದ ಮೇಲೆ ನನ್ನ ಆತ್ಮದ ಮೇಲೆ
ಯಾಕಿಂಥ ಕಪ್ಪು ಕಲೆ ?
ತಣ್ಣಗಿನ ಬಿಳುಚಿದ ನೆನಪುಗಳು ಚಿಂತೆಗಳು
ಗಾಜು ಪಾರದರ್ಶಕವಾಗಿ ಇಂದೂ
ನನ್ನೊಳಗೆ ಕುಳಿತು
ನಿದ್ದೆ ಬರದು.

ಮೂಲ : ಮರುಓಕಾ ಕದಾವೊ
ಅನು : ವಿಕ್ರಮ ಪಾಂಡ್ಯ

[ಜಪಾನಿನ ಅಸ್ಪೃಶ್ಯರಿಗೆ (ಬುರಾಕುಮಿನ್ ಎಂದು ಹೆಸರು) ಕೀಳುತನದ ಸಂಕೇತವಾಗಿ ಅವರ ಎಡಬಲ ಕಂಕುಳಲ್ಲಿ ದೇವರುಕೊಟ್ಟ ನೀಲಿ ಬಣ್ಣದ ಮಚ್ಚೆ ಗಳಿರುತ್ತವೆ ; ಎಂಬುದು ಜಪಾನಿಯರ ನಂಬಿಕೆ !]

ಮೀಸಲಾತಿ ಬಹಳ ಕಾಲ ಉಳಿಯೋಲ್ಲ: ಪಾರ್ವತ

ಹಿಂದಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಡಿ.ವಿ. ಅರಸು ಅವರ ಕಾಲ ಅನೇಕ ರೀತಿಯಿಂದ ಪ್ರಸಿದ್ಧವಾದುದು. ಇಡಿಯಾಗಿ ಮೈಸೂರು ವಿ.ವಿ. ಅಧ್ಯಾಪಕ–ಪ್ರಾಧ್ಯಾಪಕರುಗಳು ಎರಡು ಭಾಗವಾಗಿ ಅಖಾಡಕ್ಕೆ ಇಳಿದು ಒಂದು ಕಡೆಯವರು ಅರಸು ಪರವಾಗಿಯೂ ಮತ್ತೊಂದು ಕಡೆಯವರು ಅರಸು ವಿರುದ್ಧವಾಗಿಯೂ ಹೋರಾಡಿದುದುಂಟು. ಪುರೋಗಾಮಿಗಳೆನ್ನಿಸಿಕೊಂಡ ಬಹಳ ಮಂದಿ ಸದಸ್ಯರಿದ್ದ ಮೂಟ (MUTA) ಅರಸು ವಿರುದ್ಧವಾಗಿ ಯಶಸ್ವಿಯಾಗಿ ಕೆಲಸ ಮಾಡಿತಲ್ಲದೆ, ಅಂದಿನ ಮೂಟದ ಅಧ್ಯಕ್ಷೆ ಡಾ. ಸಿ. ಪಾರ್ವತಮ್ಮ ಅವರಾಗಿದ್ದರು. ಇನ್ನೇನು ಅರಸು ನಂತರದಲ್ಲಿ ಮೈಸೂರು ವಿ.ವಿ.ದ ಉಪಕುಲಪತಿಯಾಗಿ ಬಿಡುತ್ತಾರೆ ಎಂಬ ಸುದ್ದಿ ದಟ್ಟವಾಗಿ ಹಬ್ಬಿದ್ದಾಗಲೇ; ಇವರು ಮೂಟದ ಅಧ್ಯಕ್ಷೆಯಾಗಿ ಅರಸು ವಿರೋಧಿಸಿದ ಕಾರಣದಿಂದಾಗಿಯೇ ಉಪಕುಲಪತಿಯಾಗಲಿಲ್ಲವೆಂಬುವ ಮಾತೂ ಕೇಳಿ ಬಂತು. ಹಾಗೇಯೇ ಲಿಂಗಾಯಿತ ಕೋಮಿನವರು ಇವರನ್ನು ಲಿಂಗಾಯಿತ ವಿರೋಧಿ ಅಂದರೆ; ಒಕ್ಕಲಿಗರು ಒಕ್ಕಲಿಗರ ವಿರೋಧಿ ಎಂದೂ; ದಲಿತ ಜನಾಂಗದವರು ದಲಿತರ ವಿರೋಧಿ ಎಂದೂ ಭಾವಿಸುವುದುಂಟು. ಅದಲ್ಲದೆ ಈ ಎಲ್ಲಾ ರೀತಿಯ ವಿರೋಧ ಪಾರ್ವತಮ್ಮನವರ ವಿರೋಧ ಭಾವನೆಗಳನ್ನು ಬ್ರಾಹ್ಮಣರು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎನ್ನುವ ಪ್ರಚಾರವೂ ಗಂಗೋತ್ರಿಯಲ್ಲಿ ಇಂದಿಗೂ ಇರುವಂಥದ್ದೇ ಆಗಿದೆ. ಇವೆಲ್ಲಾ ವದಂತಿಯೋ, ಸತ್ಯವೋ, ಅಸತ್ಯವೋ ಅಂತೂ ದಟ್ಟವಾಗಿರುವ ಸಮಸ್ಯೆಯ ಮಾತುಕತೆಗಳ ನಡುವಿರುವ ಪಾರ್ವತಮ್ಮನವರನ್ನು 'ಪಂಚಮ'ಕ್ಕೆ ಸಂದರ್ಶಿಸುವುದೇಗೆಂದು ಸಮಸ್ಯೆಯಾಗಿತ್ತು.

ಚಿತ್ರದುರ್ಗ ಜಿಲ್ಲೆಯ ಶಾಗ್ಲಿಯವರಾದ ಪಾರ್ವತಮ್ಮ ತಮ್ಮ ತಂದೆ ಹನುಮಂತಪ್ಪನವರನ್ನು ಬಾಲ್ಯದಲ್ಲಿ ಕಳೆದುಕೊಂಡರೂ; ತಾವು ಕಲಿಯಲಾಗದಿದ್ದನ್ನು ಮಗಳು ಕಲಿಯಲಿ ಎಂಬುವ ತಾಯಿ ಶಿವರುದ್ರಮ್ಮ ಮತ್ತು ಅಜ್ಜಿಯ ಶ್ರಮದಿಂದ ತಾವು ಓದಿದ್ದನ್ನು ಸ್ಮರಿಸಿಕೊಂಡರು. ದಾವಣಗೆರೆಯ ಪ್ರೌಢಶಾಲೆಯ ಶಿಕ್ಷಣದ ನಂತರದಲ್ಲಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್‌ಗೆ ಸೇರಿದಾಗ ಎ. ಕೆ. ಗರ್ಲ್ಸ್ ಬೋರ್ಡಿಂಗ್‌ನಲ್ಲಿ ನಡೆದ ಅಹಿತಕರ ಘಟನೆಯನ್ನು ಬಿಟ್ಟರೆ, ತಮ್ಮ ಇಡೀ ಹಾಸ್ಟೆಲ್ ಜೀವನದಲ್ಲಿ ಅಸ್ಪೃಶ್ಯತೆಯಿಂದಾಗಿ ಯಾವ ತೊಂದರೆಯೂ ಆಗಲಿಲ್ಲವೆಂದು ತಿಳಿಸಿದರು.

೧೯೫೩ರಲ್ಲಿ ಎಂ. ಎ. ಯಿಂದ ತೇರ್ಗಡೆಯಾಗಿ ಮಹರಾಜ ಕಾಲೇಜು ಅಧ್ಯಾಪಕರಾದ ಮೇಲೆ; ೧೯೫೩ರಲ್ಲಿ ಕರ್ನಾಟಕ ಸರ್ಕಾರದ ಸ್ಕಾಲರ್‌ಶಿಪ್ ಪಡೆದು ಮೆಂಚೆಸ್ಟರ್ ವಿಶ್ವವಿದ್ಯಾನಿಲಯಕ್ಕೆ ಹೋಗಿ ಅಲ್ಲಿ ಪಿ. ಎಚ್. ಡಿ. ಪಡೆದು ಹಿಂದಿರುಗಿದ ನಂತರ—ಅಂದು ಸಮಾಜಶಾಸ್ತ್ರದ ಮುಖ್ಯಸ್ಥರಾದ ವೆಂಕಟರಾಯಪ್ಪ ಅಧ್ಯಾಪಕರುಗಳ ಕಡೆಯಿಂದ ನಾನಾ ರೀತಿಯ ಕಿರುಕುಳವನ್ನು ಕೊಡಿಸಿದರು ಇವರ ಪರವಾಗಿ ಏನಾರೂ ಕೆಲಸ ಮಾಡಿದ, ಮಾತಾಡಿದ ಎಷ್ಟೋ ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ನಾನಾ ರೀತಿಯ ಹಿಂಸೆಗೆ ಗುರಿಪಡಿಸಿದ–ಈ ಎಲ್ಲಾ ಸಂಗತಿಗಳನ್ನು ಸ್ಮರಿಸಿಕೊಳ್ಳುತ್ತಾ, ನಾನಾ ರೀತಿಯ ಸಮಸ್ಯೆಗಳ ನಡುವೆಯೂ ಸಮಾಜಶಾಸ್ತ್ರದ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿ ಉಳಿದು ಬಂದಿದ್ದಾರೆ.

ಸಂದರ್ಶಕ : ದೇವಯ್ಯ ಹರವೆ

ಪ್ರಶ್ನೆ : ಈಗ ಕೆಲವು ತಿಂಗಳುಗಳ ಕೆಳಗೆ ಶೇ. ಹದಿನೆಂಟರ ಮೀಸಲಾತಿ ಆಧಾರದ ಮೇಲೆ ಅಧ್ಯಾಪಕರು, ರೀಡರ್ ಹುದ್ದೆಗೆ ಸಂದರ್ಶನಕ್ಕಾಗಿ ಅಭ್ಯರ್ಥಿಗಳನ್ನು ಕರೆದು, ಅರ್ಹತೆಯಿರುವ ಅಭ್ಯರ್ಥಿಗಳಿದ್ದಾಗ್ಯೂ ಯಾರನ್ನು ತೆಗೆದುಕೊಳ್ಳಲಿಲ್ಲ ಯಾಕೆ?

ನಮ್ಮ ವಿಭಾಗದಲ್ಲಿ ಸಾಕಷ್ಟು Scheduled Caste representation ಇದೆ; ಮಹರಾಜ ಕಾಲೇಜಿನಲ್ಲಿ ನೋಡಿ, ಸಂಜೆ ಕಾಲೇಜಿನಲ್ಲಿ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಮಾನಸಗಂಗೋತ್ರಿಯಲ್ಲಿ—ಎಲ್ಲ ಕಡೆಯೂ ವಿಶ್ವವಿದ್ಯಾನಿಲಯದವರು ಅಳವಡಿಸಿಕೊಂಡಿರೋ ರೋಸ್ಟರ್ ವ್ಯವಸ್ಥೆಯೇ ಸರಿಯಾದುದಲ್ಲ. ಪ್ರತಿ ವಿಭಾಗದಲ್ಲಿ ಮೀಸಲಾತಿಯನ್ನು ಅಳವಡಿಸಬೇಕು. ಹಾಗೇನಾದರೂ ಆಗದಿದ್ದರೆ ಇನ್ನೊಂದು ಶತಮಾನ ಕಳೆದರೂ ಕೆಲವು ವಿಭಾಗದಲ್ಲಿ ಮೀಸಲಾತಿಯ ಪ್ರಾತಿನಿಧ್ಯ ಇರೋಲ್ಲ. ನಮ್ಮ ಸಂದರ್ಶನದ ಸಂದರ್ಭದಲ್ಲೇ ಭೂಗರ್ಭಶಾಸ್ತ್ರಕ್ಕೆ-ಸಂದರ್ಶನ ಇತ್ತು. ಅಲ್ಲಿ ಹದಿನಾರು ಅಧ್ಯಾಪಕ ಹುದ್ದೆಗಳಲ್ಲಿ ಒಂದಾದರೂ ಮೀಸಲಾತಿ ನಿಯಮಕ್ಕೆ ಒಳಗಾಗಲಿಲ್ಲ ಯಾಕೆ? ನಾನು ವಿಶ್ವವಿದ್ಯಾನಿಲಯದವರನ್ನು ವಿರೋಧಿಸುತ್ತೇನಲ್ಲಾ ಅದಕ್ಕೆ ಮುಂದೆ ನನಗೆ ಬೆರಳಿಟ್ಟು ತೋರಿಸುವುದಕ್ಕೆ ನೋಡಿ ಇವರು Scheduled Caste Professor ಆಗಿ ಬರಿ Scheduled Casteನವರನ್ನೇ ತುಂಬಿಕೊಂಡಿದ್ದಾರೆ ಎಂದು ತೋರಿಸುವುದಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳೂ ಈ ಕುತಂತ್ರ ಹೂಡಿದ್ದಾರೆ.

ಪ್ರಶ್ನೆ : ಇವರೂ ದಲಿತ ಜನಾಂಗದಿಂದ ಬಂದವರಾಗಿ ಮೀಸಲಾತಿ ಅನ್ವಯ ಬಂದ ಸ್ಥಾನಗಳನ್ನು ಬಿಡುವುದೇಕೆ? ಅವಕಾಶ
ಒಂದಿಷ್ಟು ದಲಿತ ಹುಡುಗರಿಗೆ ಯ
ಕಾಶ ಕಲ್ಪಿಸಿಕೊಡಲಿಲ್ಲವೆಂದು ಕೆಲವ

ಯಾವುದೇ ರೀತಿಯ principles
ಕೇವಲ ಅವಕಾಶಗಳನ್ನೇ ಉಪಯೋಗಿ
ದರೆ ನಾವುಗಳೆಲ್ಲಾ ರಾಜಕೀಯ ಮ
ವಾಸಿಯಿತ್ತು. ನಾವು ಇಲ್ಲಿರುವಾಗ ಕೆ
ರೀತಿನೀತಿ ನಿಯಮಗಳನ್ನು ಅನುಸರಿಸಲ

ಪ್ರಶ್ನೆ : ದಲಿತ ವಿದ್ಯಾರ್ಥಿಗಳನ್ನು
ತೆರೆದ ತರಗತಿಗಳಲ್ಲಿ ಬಯ್ಯುತ್ತೀರಿ
ಕೆಲವರಿಗೆ ಅಸಮಾಧಾನವಿದೆ.

ನಮ್ಮ ವಿದ್ಯಾರ್ಥಿಗಳು ಕಷ್ಟಪಡ
ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊ
ಮೇಲೆ ಪರದಾಡುವ ಸ್ಥಿತಿ ಇವರದು.
ಇವರಿಗೆ ಮೊದಲನೆಯ ದರ್ಜೆಯ ನ
ಕೊಡುವುದಿಲ್ಲ ತಗೋಬೇಕು. ಇವರಲ್ಲಿ
ದೇ ರೀತಿಯ ಪ್ರಾಮಾಣಿಕತೆ ಕಡಿಮೆ.
ಸಮಾಜ ಕಲ್ಯಾಣ ಇಲಾಖೆಯವರು
ವಿದ್ಯಾರ್ಥಿ ವೇತನ ಕೊಡೋ ಸಂದ
ಗುಣ, ನಡತೆ, ಹಾಜರಾತಿ ಸರ್ಟಿಫಿಕೇಟ್
ತ್ತಾರೆ. ಇವರಿಗೆ ನೂರಕ್ಕೆ ಎಪ್ಪತ್ತೈದು
ದಷ್ಟು ಹಾಜರಾತಿ ಬಾರದಿದ್ರೆ ಅವರು ವಿ
ವೇತನ ನಿಲ್ಲಿಸ್ತಾರೆ. ಆಗ ನಮ್ಮನ್ನ ದೂ
ಯಾವ ಚೆಂದ ಹೇಳಿ. ಅದಕ್ಕೆ ಸ್ವಲ್ಪ
ಕೊಳ್ಳಲಿ ಅಂತ ಎಲ್ಲರೆದುರಿಗೇ ಬಯ
ಇದನ್ನ ತಪ್ಪೂಂದ್ರೆ ನಾನೇನೂ ಮಾಡೋಕ

ನಮ್ಮ ಅಧ್ಯಾಪಕರಿದ್ದಾರೆ. ಇವರೂ
ಇಷ್ಟೊಂದು ಜನ Scheduled c
ಅಧ್ಯಾಪಕರಲ್ಲಿ ಯಾವನೊಬ್ಬನೂ ಸಂಶೋ
ಮಾಡಬೇಕೂ ಅಂತ ಬರಲಿಲ್ಲ. Rege
ಕೂಡ ಮಾಡಿಸಿಲ್ಲ. ಇವರೂ ನಮ್ಮನ್ನ ಸುವ
ದೂರುವವರೇ. ಈ ಮೀಸಲಾತಿ ಬಹಳ
ಉಳಿಯುವಂಥದ್ದು ಎಂದು ಇವರಾರು ಭಾ
ಸ್ಪರ್ಧಾ ಮನೋಭಾವ ಬೆಳಸಿಕೊಳ್ಳಬೇಕ

ಪ್ರಾಧ್ಯಾಪಕರ ಹಲವಾರು ಅಭಿಪ್ರಾಯ
ಮುಖ್ಯವಾದುದಲ್ಲದೆ; ಮೀಸಲಾತಿಯ ಸಂ
ದಲ್ಲಿ ಎಲ್ಲರಂತೆ ಇವರೂ ಗೊಂದಲಕ್ಕೊಳ
ದ್ದಾರೆ ಅನ್ನಿಸಿತು. ಒಂದು ಕಡೆ ಯಾ
ರೀತಿಯ ಮೀಸಲಾತಿ ಬೇಡವೆನ್ನುತ್ತಾ ಮತ್ತ
ದು ಕಡೆ ದಲಿತ ಜನಾಂಗದವರಿಗಾಗಿ ವಿ
ಮಟ್ಟದ ಮೀಸಲಾತಿಯನ್ನು ಅನುಸರಿಸಬೇ
ತ್ತಾರೆ. ಇದಕ್ಕೆ ಕಾರಣ ಈ ರೀತಿಯ
ಲಾತಿಯಿಂದ ಉಪಯೋಗವಾಗಬೇಕಾದ
ಉಪಯೋಗವಾಗುತ್ತಿಲ್ಲವಲ್ಲಾ ಎಂಬ ಕೊ
ಒಂದು ಕಡೆಯಿದ್ದರೆ ಈ ಎಲ್ಲ ಹಿಂದುಳಿದ
ವನ್ನು ಮುಂದಕ್ಕೆ ತರಲು ಸಮರ್ಥವಾದ ಬ
ವ್ಯವಸ್ಥೆ ಇಲ್ಲದೇ ಹೋದದ್ದು.

…ಲ್ಬರ್ಗಾ ವಿಶ್ವವಿದ್ಯಾನಿಲಯ : ಮೀಸಲಾತಿ ರೋಧನ

…ಲ್ಬರ್ಗಾ ವಿಶ್ವವಿದ್ಯಾನಿಲಯ 1980-81 …ಂಭವಾದರೂ ಪೂರ್ಣ ಸ್ವಾತಂತ್ರ್ಯ ಪಡೆ…ಲ್ಲ. 1980-81 ಶೈಕ್ಷಣಿಕ ವರ್ಷದ ಪರೀ… 1981ರ ಏಪ್ರಿಲ್‌ನಲ್ಲಿ ನಡೆದಾಗಲೂ … ಅವುಗಳು ಕರ್ನಾಟಕ ವಿಶ್ವವಿದ್ಯಾಲಯ …ವಾಡ)ದ ಮೇಲ್ವಿಚಾರಣೆಯಲ್ಲೇ ನಡೆ…ವು.

…ತ್ರೀಚಿಗೆ ಎರಡನೆ ದರ್ಜೆ ಗುಮಾಸ್ತರು(43) …(9) ಬೆರಳಚ್ಚುಗಾರರು (13) ಅಟೆಂಡರು (18) ನೇಮಕ ಮಾಡಿಕೊಳ್ಳಲಾಗಿದ್ದು …ಲ್ಲಿ ಅನುಕ್ರಮವಾಗಿ ದಲಿತ ನೌಕರರ 4, 1, 2, 3 ಇವೆ. ಕ.ವಿ.ವಿ.ದ ಅಧೀ… ಇರುವವರೆಗೆ ಕ.ವಿ.ವಿ.ದಂತೆಯೇ ಲಿಂಗಾ… ಪೂರಾ ಸೊತ್ತಾಗಿದ್ದ ಗುಲ್ಬರ್ಗಾ ಸ್ನಾತ…ತ್ತರ ಕೇಂದ್ರ ಸ್ವತಂತ್ರ ವಿಶ್ವವಿದ್ಯಾನಿಲಯ …ನಂತರ ನಡೆದ ನೇಮಕಾತಿಗಳಲ್ಲಿ ಶೇ. !8 …ಲಾತಿಯನ್ನು ಕಟ್ಟುನಿಟ್ಟಾಗಿ ಜಾಹಿರಾತು …ಸಲಾಗುತ್ತಿದೆ, ಅಷ್ಟೆ. ಒಟ್ಟಾರೆ ನೋಡಿದರೆ …8 ಮೀಸಲಾತಿ ಇರದೆ ಅಧ್ಯಾಪಕರು ಶೇ.6 …ಪಕೇತರರು ಶೇ. 4 ಇವೆ. 20-5-81ರ …ಕಣೆಯ ಪ್ರಕಾರ 65 ಅಧ್ಯಾಪಕರುಗಳ …ಗಳಿಗೆ ಅರ್ಜಿ ಕರೆಯಲಾಗಿದ್ದು ಇವುಗಳಿಗೆ …ಸಂದರ್ಶನ ನಡೆದಿದೆ. ನಿಯಮ ತೋರಿಸಿಯೇ … ವಿದ್ಯಾರ್ಥಿಗಳಿಗೆ ದಕ್ಕಬೇಕಾದ ಹುದ್ದೆಗಳ …ಇತರರಿಗೆ ನೀಡಲಾಗುತ್ತಿದೆ. ವಿ. ವಿ.ದ …ಕುಲಪತಿಗಳಿಗೆ ಧೈರ್ಯ ಇರುವುದಾದರೆ ಇಡಿ…ದ ಶೇ. 18 ಮೀಸಲಾತಿ ತುಂಬ ಬೇಕು. …ಾ. ಎಂ. ನಾಗರಾಜ ಅವರು ಉಪಕುಲಪತಿ… ಬರುವ ಮುನ್ನ ವಿಶೇಷ ಅಧಿಕಾರಿ ಆಗಿದ್ದ …ತೀರ್ಥರಾಜ ಪುರೋಹಿತರು ಐ.ಎ.ಎಸ್. …ಾರಿಗಳಾಗಿದ್ದರಿಂದಲೋ ಏನೋ ಉಪಕುಲ…ಗೆ ತಪ್ಪು ದಾರಿ ತೋರುವ ಯತ್ನ ನಡೆದ …ಲದಿನ ಗುಲ್ಲೆದ್ದಿತ್ತು. ಆದರೆ ಉಪಕುಲಪತಿಗಳು ಪುರೋಹಿತ ರಿಜಿಸ್ಟ್ರಾರ್ ಮಾತುಗಳಿಗೆ ಕಿವಿಗೊಡದೆ ದಿಟ್ಟ ನಿಲುವು ತಾಳತೊಡಗಿದರು.

ವಿಶ್ವವಿದ್ಯಾನಿಲಯಕ್ಕೆ ಸಂಕೇತ ಇಡಲು ಪುರೋಹಿತರು ಸೂಚಿಸಿದ್ದ "ಹಂಪೆಯ ಕಲ್ಲಿನ ರಥದ ಸುತ್ತಲೂ ಗೆರೆ ಎಳೆದು ಮಧ್ಯೆ 'ಅಮೃತಂ ವಿದ್ಯಾ' ಎಂಬ ಅಕ್ಷರಗಳಿರುವ'' ಸಂಕೇತದ ವಿರುದ್ಧ ಹಾಗೂ ಸಂಸ್ಕೃತ ಅಕ್ಷರಗಳ ವಿರುದ್ಧ ಕೆಲ ಸಂಘ ಸಂಸ್ಥೆಗಳು ಪ್ರತಿಭಟನೆ ಸೂಚಿಸಿದಾಗ ಚರ್ಚೆ ನಡೆಸಿ ಸಿಂಡಿಕೇಟ್ ಸೆನೆಟ್ ಆಗುವವರೆಗೆ ಈ ಸಂಕೇತವನ್ನು ಬಳಸುವುದಿಲ್ಲವೆಂದೂ ಆದರಿಂದ ಒಪ್ಪಿಗೆ ಸಿಕ್ಕ ಸಂಕೇತವನ್ನು ಬಳಸುವುದಾಗಿಯೂ ತಿಳಿಸಿದ್ದರು. (ಪ್ರಾರಂಭದಲ್ಲಿ ಐ. ಎ. ಎಸ್. ಅಧಿಕಾರಿಯ ಹಾಗೂ ಇಡೀ ಸಿಬ್ಬಂದಿಯ ಅಸಹಕಾರದಿಂದ ಉಪಕುಲಪತಿ ಬಳಲಬೇಕಾಯಿತು.

ಗು. ವಿ. ವಿ. ಕ್ಕೆ ರಾಜ್ಯ ಸರ್ಕಾರದಿಂದ 2 ಕೋಟಿ ರೂ ಧನ ಸಹಾಯ ಸಿಗುವವರೆಗೆ ಯುಜಿಸಿ ಗ್ರಾಂಟು ದೊರೆತುದರಿಂದ ರಾಜ್ಯ ಸರ್ಕಾರದಿಂದ ಹಣ ಪಡೆದು ಕೊಳ್ಳಲು ಉಪಕುಲಪತಿಗಳು ಹೆಣಗಾಡುತ್ತಿದ್ದಾರೆ.

ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಈಗ ಉಪಕುಲಪತಿ, ಫೈನಾನ್ಸ್ ಆಫೀಸರ್, ಇಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರ್, ಒಬ್ಬ ಡೆಪ್ಯೂಟಿ ರಿಜಿಸ್ಟ್ರಾರ್ ದಲಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಕಾರಣದಿಂದಲೋ ಏನೋ ಕರ್ನಾಟಕ ವಿಶ್ವವಿದ್ಯಾಲಯದವರು ಪೂರ್ಣವಾಗಿ ಸಹಕಾರ ನೀಡುತ್ತಿಲ್ಲ ಹಾಗೂ ಶಿಕ್ಷಕೇತರ ಸಂಘದವರು ಪರಸ್ಪರ ಚರ್ಚೆ- ವಿಚಾರ ವಿನಿಮಯಗಳ ಮೂಲಕ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಬಯಸುತ್ತಿಲ್ಲ ಎಂಬ ಭಾವನೆ ಹಲವಾರು ದಲಿತ ವಿದ್ಯಾರ್ಥಿ ಜನರಲ್ಲಿ ಮೂಡುತ್ತಿದೆ. ಉಪಕುಲಪತಿಗಳ ಹೊರತಾಗಿ ಉಳಿದ ದಲಿತ ಅಧಿಕಾರಿಗಳಂತೂ ಮಾನಸಿಕವಾಗಿ ವಿಷಣ್ಣರಾಗಿಬಿಟ್ಟಿದಾರೆ ; ತಮ್ಮನ್ನು ಮಾನಸಿಕ ಯಾತನೆಗೀಡುಮಾಡುವ ವಾತಾವರಣ ಕಂಡು ರೋಸಿಹೋಗಿದ್ದಾರೆ. ಉಪಕುಲಪತಿಗಳು ಕಾನೂನಿನ ಪರಿಮಿತಿಯಲ್ಲೇ ದಿಟ್ಟವಾಗಿ ಕೆಲಸ ಮಾಡಬೇಕೆಂಬ ಅಪೇಕ್ಷೆ ಹಲವಾರು ವಿದ್ಯಾವಂತ ದಲಿತರದ್ದು. ಆದರೆ ಹಳೇ ಮೈಸೂರಿನವರಾದ ಡಾ॥ ನಾಗರಾಜರು ತೀರಾ ಮೃದು ಸ್ವಭಾವದವರಾಗಿದ್ದು ಛಲಗಾರಿಕೆಯನ್ನು ತೋರುತ್ತಿಲ್ಲವೆಂಬುದು ದಲಿತರ ಚಿಂತೆಗೆ ವಸ್ತುವಾಗಿದೆ.

ಮೀಸಲಾತಿ ಅಂಕಿ ಅಂಶ

ಗುಲ್ಬರ್ಗಾ ಸ್ವತಂತ್ರ ವಿಶ್ವವಿದ್ಯಾನಿಲಯ ಆಗುವ ಮೊದಲಿನ ಅಂಕಿ-ಅಂಶಗಳು :

(ನಂದಿಹಳ್ಳಿ ಪಿ. ಜಿ. ಸೆಂಟರ್ ಸೇರಿ)

	ಹುದ್ದೆ	ಒಟ್ಟು ಸಂಖ್ಯೆ	ದಲಿತರು
1	ಪ್ರೊಫೆಸರ್	7	—
2	ರೀಡರ್	6	—
3	ಲೆಕ್ಚರರ್	53	3
4	ಟೆಕ್ನಿಷಿಯನ್, ಫೀಲ್ಡ್ ವರ್ಕರ್	3	—
5	ಡೆಪ್ಯೂಟಿ ರಿಜಿಸ್ಟ್ರಾರ್, ಸೂಪರಿಂಟೆಂಡೆಂಟ್	3	—
6	ಗುಮಾಸ್ತರು, ಬೆರಳಚ್ಚುಗಾರರು	21	1
7	ಲ್ಯಾಬ್ ಅಸಿಸ್ಟೆಂಟ್, ಡ್ರೈವರ್, ಪೀವನ್ ವಾಚ್‌ಮೆನ್, ಲೈನ್‌ಮೆನ್, ಪಂಪ್ ಅಟೆಂಡರ್, ಮುಕದ್ದಂ, ಮಾಲಿ, ಮೇಸ್ತ್ರಿ.	65	2
8	ಇಂಜಿನಿಯರ್ಸ್, ಎಲಕ್ಟ್ರಿಷಿಯನ್ಸ್	5	—
9	ಸ್ವೀಪರ್	4	—
	ಒಟ್ಟು	167	6

…ಷ್ಠ ವ್ಯವಸ್ಥೆಯನ್ನೂ ಮಾಡದ ಸರ್ಕಾರ : ಬೀದಿ ಪಾಲಾದ ವಿದ್ಯಾರ್ಥಿಗಳ ಪ್ರತಿಭಟನೆ

…ಲಬರ್ಗಾ ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆ …ತಾಲ್ಲೂಕುಗಳಲ್ಲಿನ ದಲಿತ ವಿದ್ಯಾರ್ಥಿಗಳು …ಲ್‌ಗಳಿಲ್ಲದೆ ಮತ್ತು ಕೆಲವು ಕಡೆ ಇದ್ದೂ …ಾದ ವ್ಯವಸ್ಥೆಯಿಲ್ಲದೆ ಬಹಳಷ್ಟು ಮಂದಿ … ವಿದ್ಯಾರ್ಥಿಗಳು ಬೀದಿ ಪಾಲಾಗಿರುವುದರ … ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂ…ಲಬರ್ಗಾ ಜಿಲ್ಲಾ ಶಾಖೆಯು ದಿನಾಂಕ …-81ರಂದು ಪ್ರತಿಭಟನಾ ಮೆರವಣಿಗೆ …ತು.

…ಮಾರು ಮೂರು ಸಾವಿರಕ್ಕೂ ಹೆಚ್ಚು …ರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದು …ಲ್ ನೀಡಿರದ ದಲಿತ ವಿದ್ಯಾರ್ಥಿಗಳಿಗೆ ಊಟ, ವಸತಿಯ ಅನುಕೂಲತೆ, ಪ್ರತಿ ತಾಲ್ಲೂಕ್‌ಗಳಲ್ಲಿಯೂ ಹಾಸ್ಟೆಲ್ ಸ್ಥಾಪನೆ, ಖಾಸಗಿ ಸಂಸ್ಥೆಗಳು ಮತ್ತು ಸಮಾಜ ಕಲ್ಯಾಣ ಇಲಾಖೆ ನಡೆಸುವ ಹಾಸ್ಟೆಲ್‌ಗಳ ನಡುವಿನ ತಾರತಮ್ಯ ನಿವಾರಣೆ, ಹೆಚ್ಚುತ್ತಿರುವ ದಲಿತ ವಿದ್ಯಾರ್ಥಿಗಳ ಆವಶ್ಯಕತೆಗನುಗುಣವಾಗಿ ಹಾಸ್ಟೆಲ್‌ಗಳ ಹೆಚ್ಚಳ, ಹಾಸ್ಟೆಲ್‌ಗಳಲ್ಲಿ ಗ್ರಂಥಾಲಯ ಹಾಗೂ ಟ್ಯೂಷನ್ ವ್ಯವಸ್ಥೆ, ಪ್ರತಿ ವರ್ಷವೂ ವಸೂಲಿ ಮಾಡುವ ಡಿಪಾಜಿಟ್ ಹಣದ ರದ್ದು, ಮತ್ತು ಈಗಿರುವ ಸ್ಕಾಲರ್ ಹಣ ಹೆಚ್ಚು ಮಾಡುವಿಕೆ ಇತ್ಯಾದಿ 19 ಬೇಡಿಕೆಗಳನ್ನುಳ್ಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಗೆ ಅರ್ಪಿಸಿತು. ಕೇವಲ ಬಾಯುಪಚಾರದ ಆಶ್ವಾಸನೆ ನೀಡಿದ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳ ವರ್ತನೆಯನ್ನು ಒಕ್ಕೂಟ ಪ್ರತಿಭಟಿಸಿ 30ರ ಸೆಪ್ಟಂಬರ್‌ವರೆವಿಗೂ ಮೇಲ್ಕಂಡ ಬೇಡಿಕೆಗಳನ್ನು ಮುಂದಿಟ್ಟು ಸರದಿ ಉಪವಾಸ ಸತ್ಯಾಗ್ರಹ ನಡೆಸಿತು.

ಸಂಬಂಧಿಸಿದ ಅಧಿಕಾರಿಗಳ, ಹಾಗೂ ದಲಿತ ಹಿತ ಚಿಂತಕರ ಆಶ್ವಾಸನೆಯ ಮೇರೆಗೆ ಸತ್ಯಾಗ್ರಹವನ್ನು ನಿಲ್ಲಿಸಿದ ಒಕ್ಕೂಟ ಭರವಸೆ ನೀಡಿಯೂ ಇನ್ನೂ ಯಾವುದೇ ಬೇಡಿಕೆಯನ್ನು ಈಡೇರಿಸದೆ ಮೌನವಾಗಿರುವ ಅಧಿಕಾರಿಗಳು ಹಾಗೂ ಸಂಬಂಧಿಸಿದವರ ವರ್ತನೆಗೆ ತನ್ನ ಪ್ರತಿಭಟನೆ ವ್ಯಕ್ತಪಡಿಸಿ ಅನಾಹುತಕ್ಕೆ ಮೊದಲೇ ಬೇಡಿಕೆಗಳನ್ನು ಈಡೇರಿಸುವಂತೆ ಮತ್ತೊಮ್ಮೆ ಎಚ್ಚರಿಕೆ ನೀಡಿದೆ.

ಮೈಸೂರ ವಿ.ವಿ. ತುಘಲಕ್ ನಿರ್ಣಯ
‘ದಲಿತ ವಿದ್ಯಾರ್ಥಿಗಳೂ ಫೀಸ್ ತೆರಲಿ’

ಪ.ಮಲ್ಲಿಕಾರ್ಜುನ

೧೯೬೯ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ನೆರಳಲ್ಲಿ ಸಣ್ಣಗೆ ಹುಟ್ಟಿದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಈಗ ಇನ್ನೊಂದು ವಿಶ್ವವಿದ್ಯಾನಿಲಯವಾಗುವಷ್ಟು ದೊಡ್ಡಕೆ ಬೆಳೆದು ನಿಂತಿದೆ. ಒಟ್ಟು ೫೩ ಜನ ಅಧ್ಯಾಪಕರುಗಳಲ್ಲಿ ೪ ಜನ ದಲಿತರನ್ನಷ್ಟೇ (ಇವರಲ್ಲಿ ಇಬ್ಬರು ಹಂಗಾಮಿಗಳು!) ಸಹಿಸಿಕೊಂಡಿರುವ ಈ ಸಂಸ್ಥೆಗೆ ಇಂಡಿಯಾದ ತುಂಬಾ ೨೦ ಸಾವಿರಕ್ಕೂ ಮೀರಿ ವಿದ್ಯಾರ್ಥಿಗಳಿದ್ದಾರೆ. ಈ ಸಂಸ್ಥೆಯ ಸರಾಸರಿ ವಾರ್ಷಿಕ ಆದಾಯ ಒಂದು ಕೋಟಿ ರೂಪಾಯಿಗಳು. ಇದುವರೆಗಿನ ಒಟ್ಟು ನಿವ್ವಳ ಉಳಿತಾಯ : ೨,೧೪,೭೦,೧೦೦ ರೂಪಾಯಿಗಳು. ಇದರಲ್ಲಿ ೧,೯೪,೯೫,೧೦೦ ರೂಪಾಯಿಗಳನ್ನು ಬ್ಯಾಂಕಲ್ಲಿ ಡಿಪಾಸಿಟ್ಟು ಮಾಡಿ ಉಳಿಕೆ ೧೯,೭೫,೦೦೦ ರೂಪಾಯಿಗಳನ್ನು ವಿಶ್ವ ವಿದ್ಯಾ ನಿಲಯಕ್ಕೇ ಮುಂಗಡವಾಗಿ ಕೊಟ್ಟಿವೆ. ಇಷ್ಟು ಆದಾಯವಿರುವ ಇನ್ನೊಂದು ಸಂಸ್ಥೆ ಇಂಡಿಯಾದಲ್ಲೆಲ್ಲೂ ಸಿಕ್ಕುವುದಿಲ್ಲ.

ಇಂಥ ಸಂಪದ್ಭರಿತ ಸಂಸ್ಥೆಯ ಎದೆಯಲ್ಲಿ ಎಂಥ ಜಾತಿ ವಿಷ ತುಂಬಿಕೊಂಡಿದೆ ಎನ್ನುವುದಕ್ಕೆ ನೋಡಿ :

ಈ ಸಂಸ್ಥೆಯ ಮೂಲಕ ವ್ಯಾಸಂಗ ಮಾಡುವ ದಲಿತ ವಿದ್ಯಾರ್ಥಿಗಳಿಗೆ ಈ ವರೆಗೆ ಶುಲ್ಕ ವಿನಾಯಿತಿ ಸಿಕ್ಕುತ್ತಿತ್ತು. ಆದರೆ ಈ ವರುಷ ಇದ್ದಕ್ಕಿದ್ದಂತೆ ಈ ಸೌಲಭ್ಯವನ್ನು ಮೈಸೂರು ವಿಶ್ವವಿದ್ಯಾನಿಲಯ ರದ್ದುಗೊಳಿಸಿ ದಲಿತರನ್ನ ಚಕಿತಗೊಳಿಸಿದೆ. ಕಾರಣ ಏನು ಗೊತ್ತೆ? ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಲ್ಲಿ ಹಣವಿಲ್ಲವಂತೆ! ಈವರೆಗೆ ದಲಿತ ವಿದ್ಯಾರ್ಥಿಗಳಿಗೆ ಮಾಡಿದ ಶುಲ್ಕ ವಿನಾಯಿತಿ ಹಣವೆಲ್ಲ ಸೇರಿ ಲಕ್ಷಾಂತರ ರೂಪಾಯಿಯಾಗಿದೆಯಂತೆ! ಅದನ್ನು ಸರ್ಕಾರ ತಕ್ಷಣ ಕೊಡದೆ ವಿಶ್ವವಿದ್ಯಾನಿಲಯವನ್ನು ಸತಾಯಿಸುತ್ತಿದೆಯಂತೆ! ದಲಿತ ವಿದ್ಯಾರ್ಥಿಗಳು ಮಿನಿಸ್ಟರುಗಳನ್ನ ಹಿಡಿದು ಇದನ್ನು ಕೂಡಲೆ ತರಿಸಿಕೊಡಬೇಕಂತೆ!! ಹೀಗೆಂದು ಉಪಕುಲಪತಿ ಹೆಗ್ಗಡೆಯವರೇ ದಲಿತ ವಿದ್ಯಾರ್ಥಿಗಳ ಮುಖಕ್ಕೆ ಹೇಳಿದ್ದಾರೆ!

ಇದರ ಹಿಂದುಗಡೆ ನಡೆದಿರುವುದ ನೋಡಿ :

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ದಲಿತ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಶುಲ್ಕ ವಿನಾಯಿತಿ ಪ್ರತಿವರ್ಷ ಸರಾಸರಿ ಎರಡೂವರೆ ಲಕ್ಷ ಆಗುತ್ತವೆ. ಈ ಹಣವನ್ನ ಕಾಲಕಾಲಕ್ಕೆ ಗ್ರಾಂಟ್ ಇನ್ ಏಡ್ ಮುಖೇನ ಸರ್ಕಾರದಿಂದ ವಿಶ್ವವಿದ್ಯಾನಿಲಯವು ಪಡೆಯುವಂತೆ ಸರ್ಕಾರಿ ಆಜ್ಞೆಗಳಿವೆ. ಆದರೆ ವಿ. ವಿ. ಮಾಡಿದ್ದು ಏನು ಗೊತ್ತೆ? ೧೯೭೩ ರಿಂದ ೧೯೭೮ರವರೆಗೆ ಈ ವಿನಾಯಿತಿ ಹಣವನ್ನ ಸರ್ಕಾರದಿಂದ ತರಿಸಿಕೊಳ್ಳುವ ಗೋಜಿಗೇ ಹೋಗಲಿಲ್ಲ! ಬದಲಿಗೆ ೧೯೭೯ ರಲ್ಲಿ ಇದ್ದಕ್ಕಿದ್ದಂತೆ ನಿದ್ದೆ ಬಿಟ್ಟಂತೆ ಆದುವರೆಗಿನ ಸುಮಾರು ೧೮ ಲಕ್ಷ ರೂಪಾಯಿಗಳ ಬಿಲ್ಲನ್ನು ಸರ್ಕಾರಕ್ಕೆ ಕಳಿಸಿ ಕೂಡಲೆ ಮಂಜೂರು ಮಾಡುವಂತೆ ಕೇಳಿತು. ಆದರೆ ಸರ್ಕಾರ ವಿಶ್ವವಿದ್ಯಾನಿಲಯದ ಈವರೆಗಿನ ವಿದ್ಯೆಯನ್ನು ಪ್ರಶ್ನಿಸಿ ಬಿಲ್ಲನ್ನು ವಾಪಸ್ಸು ಕಳಿಸಿತು.

ದಲಿತರ ಹೆಸರು ಕೇಳಿದರೇ ಕೋಪದಿಂದ ಮೈಮಾರೆಲ್ಲ ಕೆಂಪಾಗುವ ರೋಗ ಹಿಡಿದಿರುವ, ಉಪಕುಲಪತಿ ಕೆ. ಎಸ್. ಹೆಗ್ಡೆವರಿಗೆ ಇದೊಂದು ಒಳ್ಳೆ ಅವಕಾಶವಾಯಿತು. ಊರಿಂದ ದೂರವಿರುವ ಬಿ. ಆರ್. ಪ್ರಾಜೆಕ್ಟಿನಲ್ಲಿ ೯-೪-೧೯೮೧ರಂದು ಸಿಂಡಿಕೇಟ್ ಸಭೆ ಫಿಕ್ಸ್ ಆಯಿತು. ಏಕೊ ಏನೊ ಟಿ. ಎ. ಡಿ. ಎ. ಗಳಿಗೆ ಹುಟ್ಟಿದ್ದ ನಾಯಿಗಳಂತೆ ಓಡಾಡುವ ಮೂರು ದಲಿತ ಸಿಂಡಿಕೇಟ್ ಸದಸ್ಯರುಗಳು ನಾಪತ್ತೆಯಾದರು! ಸರಿ, "... ವಿದ್ಯಾರ್ಥಿಗಳೂ ಫೀಸು ತೆರಲಿ" ಎಂದು ಸ... ಪಾಸು ಆಗಿ ಜಾರಿಗೆ ಬಂದಿತು!

ಈಗ ನಡೆಯುತ್ತಿರುವುದ ನೋಡಿ :

ಇದುವರೆಗೆ ಪ್ರತಿ ವರ್ಷ ಸಹಸ್ರಾರ... ವಿದ್ಯಾರ್ಥಿಗಳಿರುತ್ತಿದ್ದ ಅಂಚೆ ಮತ್ತು ... ಶಿಕ್ಷಣ ಸಂಸ್ಥೆಯಲ್ಲಿ ಈಗ ಅವರ... ಇನ್ನೂರು ಮುನ್ನೂರಕ್ಕೆ ಇಳಿಯುತ್ತಿ... ವಿಶ್ವವಿದ್ಯಾನಿಲಯದ ಈ ತುಗಲಕ್ ನಿ... ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಅ... ವ್ಯಕ್ತಪಡಿಸಿದೆ. ಮಾನ ಮಾರಿಕೊಂಡ... ಸಿಂಡಿಕೇಟ್ ಸದಸ್ಯರು ತಮ್ಮ ಟಿ.ಎ.... ಎಣಿಸುತ್ತಾ ಬಾಯಿಗೆ ಗೂಟ ಪೆಟ್ಟ... ಮಲಗಿದ್ದಾರೆ.

ಈ ನಡುವೆ ಅಂಚೆ ಮತ್ತು ತೆರಪಿನ ... ಸಂಸ್ಥೆಯ ನಿರ್ದೇಶಕರ ಹುದ್ದೆ ಖಾಲಿ ... ಸಂದರ್ಶನ ಕೂಡ ನಡೆದಿದೆ. ಅರ್ಹ... ಅಭ್ಯರ್ಥಿಗಳ ಅರ್ಜಿಗಳು ಕಾರಣವಿಲ್ಲದೆ ನಿ... ಹುದ್ದೆಗೆ 'ಅನರ್ಹವಾಗಿ' ರಿಜೆಕ್ಟ್ ಆಗಿ ... ಮತ್ತೊಂದು ಕಡೆ ಈ ಸಂಪದ್ಭರಿತ ಸ... ಹಣದ ಹೊಳೆಯಲ್ಲಿ ಯಾರು ಈಜಾಡಬ... ಮೇಲ್ಜಾತಿಗಳ ನಡುವೆ ಭಾರಿ ಪೈಪೋಟಿ... ಕೆ. ಎಸ್. ಹೆಗ್ಡೆಯವರು ಲಕ್ಷ್ಣಗಟ್ಟಲೆ ... ತ್ತಿದ್ದಾರೆ.

....ಕಾಲೇಜ್ ಹಾ...

(7ನೇ ಪುಟದಿಂದ)

ವಿದ್ಯಾರ್ಥಿಗಳ ಮೇಲೆ ಕೂಗಾಡಿದರು. ... ಗೇನೂ ಮಾನ ಮರ್ಯಾದೆ ಇಲ್ಲವಾ... ಎನ್ನುತ್ತಾ ದಲಿತ ವಿದ್ಯಾರ್ಥಿಗಳು ಸಾರ್... ನಿಮಗೆಲ್ಲಾ ಈಗಾಗಲೇ ಪರಿಸ್ಥಿತಿ ತುಂಬ... ಗೆಟ್ಟಿದೆ, ನೀವು ಪರಿಶೀಲಿಸಿ ಸೂಕ್ತ ಕ್ರ... ಗೊಳ್ಳಿ ಅಂತ ಬರೆದು ಕೊಟ್ಟಿರೋದಿಕ್ಕೆ ... ಸಿಗಲಿಲ್ಲ. ಆದಕ್ಕಾಗಿ ನಾವು ನಮ್ಮ ರಕ್ಷ... ಡ್ಕೊ ಬೇಕಾಯ್ತು'' ಎಂದರು. ಪೊ... ಇನ್ಸ್‌ಪೆಕ್ಟರಿಂದ ಹಿಡಿದು ಎಲ್ಲರೂ ... ಹೊತ್ತು ಎಲ್ಲವನ್ನೂ ಅಜಮಾಯಿಸಿ ವ... ರಾಜಿ ಮಾಡಿಸುವ ಸೂಚನೆ ಇತ್ತು (ಪ್ರತಿ... ದಂತೆ) ಹೊರಟು ಹೋದರು. ವ... ಬೋರೆಗೌಡರು ಮೇಲ್ಜಾತಿ ವಿದ್ಯಾರ್ಥಿ... ಉದ್ದೇಶಿಸಿ "ನೋಡಿ ಅವರಿಗೆ ಬಿಟ್ಟ... ಕೊಬ್ಬು ಜಾಸ್ತಿ ಆಗಿದೆ'' ಎಂದು ಅ... ಕರಗಿಸಲು ವಾರಗಟ್ಟಲೆ ಹಾಸ್ಟೆಲ್ ಮು... ಮೇಲ್ಜಾತಿ ವಿದ್ಯಾರ್ಥಿಗಳು ಹೋಟೆಲಲ್ಲಿ... ತ್ತಾ ದಲಿತ ವಿದ್ಯಾರ್ಥಿಗಳ ಪರದಾಟ... ನಗಾಡಿದರು. ಅಂತೂ ದಲಿತರ ಕೊಬ್ಬು... ರಾಜಿ ಮಾಡಿ ಈಗ ಮತ್ತೆ ಹಾಸ್ಟೆಲ್ ... ತೊಡಗಿದೆ. ವಿಶ್ವವಿದ್ಯಾಲಯ ಮತ್ತೆ ... ಕ್ಕೆ ಕಣ್ಣು ಮುಚ್ಚಿಕೊಳ್ಳತೊಡಗಿದೆ.

...ರ್ನಾಟಕ ವಾರ್ಸಿಟಿಯಲ್ಲಿ ದಲಿತರು ದೂರ ದೂರ!

...ರವಾಡದ ಕರ್ನಾಟಕ ವಿಶ್ವವಿದ್ಯಾಲಯ ...ಟಕದ ಬೇರೆ ವಿಶ್ವವಿದ್ಯಾಲಯಗಳಿಗಿಂತ ...ನ್ನು ತುಳಿಯುವ ವಿಷಯದಲ್ಲಿ ಎಳ್ಳಷ್ಟೂ ...ಬಿದ್ದಿಲ್ಲ. ಉತ್ತರ ಕರ್ನಾಟಕದ ಏಕೈಕ ...ದ್ಯಾಲಯವಾಗಿದ್ದ ಕ. ವಿ. ವಿದ್ಯಾಲಯದ ...ರರು, ದಲಿತರನ್ನು ಯಾವಾಗಲೂ ವಿ. ವಿ. ...ದ ದೂರವೇ ಇಟ್ಟಿದ್ದಾರೆ. ಸರಕಾರದ ...ರಾತಿ ಪದ್ಧತಿಯಾಗಲೀ, ಸರಕಾರದ ಪ್ರತಿ ...ಾಗಲೀ, ವಿ.ವಿ. ಯದ ಈ ಅಕ್ರಮದ ಬಗ್ಗೆ ... ಶಬ್ದ ಕೂಡಾ ಎತ್ತದಿರುವುದು ಇಲ್ಲಿಯ ... ಕೋಮಿನ ರಾಜಕೀಯ ಬರ್ಬರತೆಯನ್ನು ...ಸುತ್ತದೆ.

...580 ಶಿಕ್ಷಕರಿರುವ ಕ. ವಿ. ವಿ. ಯದಲ್ಲಿ ... ರೆಗ್ಯುಲರ್ ಪರಿಶಿಷ್ಟ ಜನಾಂಗದ ಉಪ ...ಕರಿದ್ದು ಒಬ್ಬಕೂಡಾ ರೀಡರ್ ಪ್ರೊಫೆಸರ್ ... ಇಲ್ಲ.

...40 ಶಿಕ್ಷಕೇತರರಿರುವ ಕ. ವಿ. ವಿ. ಯಲ್ಲಿ ...ನ ಪರಿಶಿಷ್ಟ ಜಾತಿ ಹಾಗೂ ಜನಾಂಗಕ್ಕೆ ... ನೌಕರರಿದ್ದಾರೆ. ಇವರಲ್ಲಿ ಅತೀ ದೊಡ್ಡ

ತೇಜಸ್ವಿ ಕಟ್ಟಿಮನಿ

...ಯಿರುವವನೆಂದರೆ– ಒಬ್ಬನೇ ಒಬ್ಬ ಕಛೇರಿ ...ಯಕ ಮೇಲ್ವಿಚಾರಕ ಅಂತಾ ಇದ್ದು ...ವರೆಲ್ಲ ಇದಕ್ಕಿಂತ ಕೆಳಗಿನ ನೌಕರರಿದ್ದಾರೆ. ... ಗಮನಿಸಬೇಕಾದ ಅಂಶವೆಂದರೆ ಅತೀ ... ಸಂಖ್ಯೆಯಲ್ಲಿ ದಲಿತರು ಸ್ವೀಪರ್ ಅಂತಾ ... ವಿ. ಲಯದಲ್ಲಿ ಕೆಲಸಕ್ಕೆ ಸೇರಿರುವುದು. ...ನತೆವೆತ್ತ(?) ಕರ್ನಾಟಕ ವಿ. ವಿ. ಲಯವು ...ೋದ್ಧಾರ ಕಾರ್ಯವನ್ನು ಈ ರೀತಿ ಮಾಡಿ ...ತು ಬಂದಿದೆ.

... ಎರಡು ಮೂರು ವರ್ಷಗಳಿಂದ ಸಂದರ್ಶ ...ಕರೆಯುವ ಪ್ರಕಟಣೆಯಲ್ಲಿ ಸ್ಥಳ ಕಾಯ್ದಿರಿ ...ಪರಿಪಾಠವೇನೋ ಇದೆ. ಆದರೆ, ಕಾಯ್ದಿಟ್ಟ ...ಡ'ದ ಯೋಗ್ಯ ಅಭ್ಯರ್ಥಿಗೆ ಕೊಡಬೇಕೆಂಬ ...ಸವನ್ನೇನು ಈ ವಿಶ್ವವಿದ್ಯಾಲಯ ಇಟ್ಟು ...ಿಲ್ಲ.

...ಶಾಸ್ತ್ರ ವಿಭಾಗದ "ರೀಡರ್" ಹುದ್ದೆಗೆ ...ಬಿ. ಕೃಷ್ಣಮೂರ್ತಿ ಸರಿಯಾದ ಅಭ್ಯರ್ಥಿ ...ದ್ದೂ, ಆ ಹುದ್ದೆ "ದಲಿತ"ರಿಗೆ ಮೀಸ ..., ಪಿ. ಎಚ್. ಡಿ. ಇರದ ಇನ್ನೊಬ್ಬ ...ಮುವರಿದ ಅಭ್ಯರ್ಥಿಯನ್ನು ಆಯ್ಕೆ ಮಾಡ ...ತು! ಆಯ್ಕೆ ಸಮಿತಿ 5 ವರ್ಷಗಳಲ್ಲಿ ...ಚ್. ಡಿ. ಮುಗಿಸಬೇಕೆಂದು ಆಯ್ಕೆಯಾದ ...ರ್ಥಿಗೆ ಒಂದು ಕರಾರು ಹಾಕಿತು!! ಘನತೆವೆತ್ತ ...ಪಾಲರು ಇದನ್ನು ಮಂಜೂರು ಮಾಡಿದರೆ;

...ಜ್ಯಶಾಸ್ತ್ರ ವಿಭಾಗದ ಪರಿಶಿಷ್ಟ ಜಾತಿ ಹಾಗೂ ಜನಾಂಗಕ್ಕೆ ಮೀಸಲಿರಿಸಿದ ಸ್ಥಳಗಳಿಗೆ ಅದೇ ಜಾತಿ, ಪಂಗಡಗಳಿಗೆ ಸೇರಿದ ಶ್ರೀ ನಾಗಣ್ಣನವರ ಹಾಗೂ ಶ್ರೀ ಹಾದೀಮನಿ ಅವರನ್ನು ಆಯ್ಕೆ ಸಮಿತಿ ಸಿಫಾರಸು ಮಾಡಿದರೂ ಇದೇ ಘನತೆವೆತ್ತ ರಾಜ್ಯಪಾಲರು, ಪ್ರಸ್ತುತ ಅಭ್ಯರ್ಥಿಗಳು ಅಷ್ಟೊಂದು ಯೋಗ್ಯರಲ್ಲವೆಂದು ತಿರಸ್ಕರಿಸಿಬಿಟ್ಟರು. ಇವೆಲ್ಲವೂ ಈಗ ಹೈಕೋರ್ಟಿನಲ್ಲಿ ಕೊಳೆಯುತ್ತಿವೆ.

ಹೀಗೆ ಕರ್ನಾಟಕ ವಿಶ್ವವಿದ್ಯಾಲಯದ ಖೂಳರು ಹಲ್ಲುಗಟಗರಿಸಿ ಕೈಗೊಂಡಿರುವ ದಲಿತೋದ್ಧಾರ ಕಾರ್ಯಕ್ರಮದಲ್ಲಿ ರಾಜ್ಯಪಾಲರ ಹಾಗೂ ಅವರ (ಹೆಡ್ಡ) ಸಿಬ್ಬಂದಿಯ ಸಿಂಹಪಾಲು ಇದೆ.

ಇನ್ನು ಕ. ವಿ. ವಿ. ಯದ ಹಾಸ್ಟೆಲ್ಲುಗಳಲ್ಲಂತೂ ದಲಿತ ವಿದ್ಯಾರ್ಥಿಗಳಿಗೆ ನರಕ ಯಾತನೆ ಕೊಡಲಾಗುತ್ತಿದೆ.

ಕಕ್ಕಸ್ಸು ಮನೆ ಹಾಗೂ ಸ್ನಾನದ ಮನೆಯ ಪಕ್ಕದ ಕೋಣೆಗಳನ್ನೂ ದಲಿತರಿಗಾಗಿ ಇಲ್ಲಿ ಮೀಸಲಿರಿಸಲಾಗುತ್ತಿದೆ.

ಕಿಟಕಿ, ಬಾಗಿಲು ಮುರಿದ ಕೋಣೆಗಳು ಸಹ ದಲಿತ ವಿದ್ಯಾರ್ಥಿಗಳಿಗೆ ಮೀಸಲೆಂದು ಇಲ್ಲಿಯ ಸಿಬ್ಬಂದಿ ಭಾವಿಸಿದೆ.

ವಿದ್ಯಾರ್ಥಿವೇತನ ಬರುತ್ತಿದ್ದರೂ ವಾರಕ್ಕೆ ಒಮ್ಮೆಯಾದರೂ ದಲಿತ ವಿದ್ಯಾರ್ಥಿಗಳಿಗೆ ಫೀಸು ತುಂಬುವ ಬೆದರಿಕೆಯೊಂದಿಗೆ ಒಮ್ಮೊಮ್ಮೆ ಊಟವನ್ನು ಬಂದು ಮಾಡಲಾಗುವುದು.

ದಲಿತ ವಿದ್ಯಾರ್ಥಿನಿಯರು, ಹಾಗೂ ದಲಿತ ಮಹಿಳಾ ನೌಕರರ ಶೀಲವನ್ನು ಗೇಲಿ ಮಾಡಿ ಸೈಕ್ಲೋಸ್ಟೈಲ್ ಮಾಡಿದ ಕರಪತ್ರಗಳನ್ನು ವಿ. ವಿ. ನಿಲಯದ ಗೋಡೆ ಮೇಲೆಲ್ಲಾ ಎಷ್ಟೋ ಸಲ ಹಚ್ಚಲಾಗಿದೆ.

ಹೀಗೆ ದಲಿತರಿಗೆ ನಾನಾ ರೀತಿಯ ಕಿರುಕುಳ ಕೊಡುವಲ್ಲಿ ಇಲ್ಲಿಯ ಮುಂದುವರಿದ ಅಧಿಕಾರಿಗಳು, ನೌಕರರು ಎತ್ತಿದ ಕೈ ಎನಿಸಿದ್ದಾರೆ.

ಕೆಳಗಿನ ಕೋಷ್ಟಕವು ಕ. ವಿ. ವಿದ್ಯಾಲಯದಲ್ಲಿಯ ಶಿಕ್ಷಕರ ಹಾಗೂ ಶಿಕ್ಷಕೇತರರ ಸಂಖ್ಯೆಯೊಂದಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ನೌಕರರ ಸಂಖ್ಯೆಯನ್ನು ತೋರಿಸುತ್ತದೆ.

ಶಿಕ್ಷಕರು	ಒಟ್ಟು	ಪ.ಜಾತಿ|ಜನಾಂಗ
1. ಖಾಯಂ	580	5
2. ಹಂಗಾಮಿ	46	8
	626	13
ಶಿಕ್ಷಕೇತರರು		
1. ಖಾಯಂ	1240	69
2. ದಿನಗೂಲಿಗಳು		
ಅ) ಬೇರೆ ಅಜ್ಞೆ ಬರುವವರೆಗೆ ನಿಯುಕ್ತರಾದವರು	121	37
ಆ) 30 ದಿನಗಳ ಆಧಾರದ ಮೇಲೆ ನಿಯುಕ್ತರಾದವರು	33	9
ಒಟ್ಟು	1394	115

ಕೆಳಗಿನ ಕೊಷ್ಟಕವು ಪರಿಶಿಷ್ಟ ಜನಾಂಗ ಹಾಗೂ ಜಾತಿಗೆ ಸೇರಿದ ಶಿಕ್ಷಕೇತರ ನೌಕರರು ಯಾವ ಹುದ್ದೆಯಲ್ಲಿ ಎಷ್ಟು ಜನರಿದ್ದಾರೆಂಬುದನ್ನು ತೋರಿಸುತ್ತದೆ.

ಕೆಲಸ	ಸಂಖ್ಯೆ
1) ಕಛೇರಿ ಸಹಾಯಕ ಮೇಲ್ವಿಚಾರಕ	1
2) ಸೀನಿಯರ್ ಕಾರಕೂನ	3
3) ಜ್ಯೂನಿಯರ್ ಕಾರಕೂನ	13
4) ಪ್ರಯೋಗ ಶಾಲೆ ಅಸಿಸ್ಟೆಂಟ್	1
5) ಪ್ರಯೋಗ ಶಾಲೆ ಅಟೆಂಡರ್	2
6) ಬೈಂಡರ್	3
7) ಸಿಪಾಯಿ	16
8) ಫಿಟ್ಟರ್	1
9) ಅಸಿಸ್ಟೆಂಟ್ ವಾಲ್ಮನ್	1
10) ಸ್ವೀಪರ್	20
11) ವಾಚಮನ್	6
12) ಗೌಂಡಿ	1
13) ಡ್ರೈವರ್	1
ಒಟ್ಟು	69

ಎ. ಡಿ. ಕೃಷ್ಣಯ್ಯ : ಪ್ರತಿಭೆ ಅರ್ಹತೆಗಳಿದ್ದೂ ಅನ್ಯಾಯ

ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವ್ವನ ಹಳ್ಳಿ ಗ್ರಾಮದ ಕೃಷ್ಣಯ್ಯನವರು ಧೈರ್ಯಕ್ಕೇನೇ ಮತ್ತೊಂದು ಹೆಸರಾದ ಒನಕೆಯ ಓಬವ್ವನ ವಂಶಸ್ಥರು-ಓಲಗ ಊದುವ-ಕಹಳೆ ಬಾರಿಸುವ-ಆಯುರ್ವೇದ ವಿದ್ಯೆಯನ್ನು ಕಲಿತಿದ್ದ-ಅದ್ಭುತವಾಗಿ ಮೊಳಕಾಲುಮೂರು ರೇಷ್ಮೆಸೀರೆಯನ್ನು ನೇಯುವಂಥ ಹಲವಾರು ಪ್ರತಿಭೆಗಳನ್ನು ಮೈಗೂಡಿಸಿಕೊಂಡಿದ್ದ ತಂದೆ, ಸಿಡಿಲು ಹೊಡೆದಂತೆ ಕಹಳೆ ಊದುತಿದ್ದ ತಾತ ಹಾಗೂ ತನ್ನ ಅಣ್ಣಂದಿರ ಪರಿಶ್ರಮ ತನ್ನ ಜೀವನ ರೂಪಿಸಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ತಾವು ಅನುಭವಿಸಿರಬಹುದಾದ ಅಸ್ಪೃಶ್ಯತೆಯ ಮುಖ್ಯ ಘಟನೆಗಳನ್ನು ತಿಳಿಸಿಕೊಡಿ ಎಂಬುದಕ್ಕೆ ಅವರು- ಆಗೇನೋ ಅಸ್ಪೃಶ್ಯತೆಯ ಭಾವನೆ ಹೆಚ್ಚಾಗಿಯೇ ಇತ್ತು. ಆದರೆ ಇತರೇ ಜನ-ವರ್ಗದಲ್ಲಿ ಅಸ್ಪೃಶ್ಯರನ್ನು ಕಂಡರೆ ಸಹಾನುಭೂತಿ ಇತ್ತೇ ವಿನಃ ದ್ವೇಷ, ಅಸೂಯೆ, ಮಯತ್ಸರ್ಯಗಳಿರಲಿಲ್ಲ ಎಂದರು. ಮದುವೆ ಮನೆಗಳಿಗೆ ತಂದೆಯ ಜೊತೆ ಓಲಗ ಊದುವುದಕ್ಕೆ ಹೋದಾಗ ಚಪ್ಪರದಲ್ಲಿ ಕೂಡ್ರಿಸಿ ಬೇರೆ ಊಟ ಹಾಕುತ್ತಿದ್ದರಲ್ಲದೆ ಯಾವ ಕಾರಣಕ್ಕಾಗಿಯಾದರೂ ಮೇಲು ವರ್ಗದವರು ಮುಟ್ಟಿಸಿಕೊಳ್ಳುವ ತಪ್ಪು ಮಾಡುತ್ತಿರಲಿಲ್ಲ. ೧೯೪೦ರ ಸುಮಾರಿನಲ್ಲಿ ಚಿತ್ರದುರ್ಗದ ಹೋಟಲೊಂದಕ್ಕೆ ಸವರ್ಣೀಯ ಶರ್ಮ ಎಂಬ ಸಮಾಜ ಸುಧಾರಕರೊಬ್ಬರ ಜೊತೆ ಹೋದಾಗ ಅಲ್ಲಿನ ಮಾಲೀಕ ಅವರಿಗೆ ತಿಂಡಿಕೊಡಲೊಪ್ಪಿ ಇವರಿಗೆ ನಿರಾಕರಿಸಿದಾಗ ಶರ್ಮರು 'ಇವರಿಗೆ ಕೊಡದಿದ್ದರೆ ನನಗೂ ಒಂದು ತೊಟ್ಟು ನೀರು ಕೊಡಬೇಡ' ಎಂದು ಇವರ ಜೊತೆಗೆ ಎದ್ದು ಬಂದರಂತೆ. ಬಹು ಸುಂದರರಾದ ಕೃಷ್ಣಯ್ಯನವರು ಮನೆ ಕೇಳಲು ಹೋದಾಗ ಯಾರಾದರೂ ಒಪ್ಪಿಕೊಂಡು ನಂತರ ಯಾರ ಯಾರ ಮುಖಾಂತರವೋ ಕುಲ ಮತ ವಿಚಾರಿಸಿಕೊಂಡು ಮನೆ ಕೊಡುತ್ತಿರಲಿಲ್ಲವೆಂತಲೂ, ಮುಂಗಡ ಹಣ ಪಡೆದುಕೊಂಡು ಹಿಂದಕ್ಕೆ ಕೊಟ್ಟು, ಕೀ ಕೊಟ್ಟು ಮತ್ತೆ ಕೀ ಹಿಂದಕ್ಕೆ ಪಡೆದುಕೊಂಡ ಪ್ರಕರಣಗಳನ್ನು ಹೆಸರಿಸಿದರು.

೧೯೭೪ ರಲ್ಲಿ ಹಂಗಾಮಿಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಡೆಪ್ಯುಟಿ ಕಂಟ್ರೋಲರ್ ಆಗಿ ನೇಮಕವಾದರು. ೧೯೭೫ ರಲ್ಲಿ ಖಾಯಂಗೊಂಡರೂ ಇವರಿಗೆ ಅಧ್ಯಾಪಕ ಪದವಿಯಲ್ಲಿ ಸಿಗುತ್ತಿದ್ದುದಕ್ಕಿಂತಲೂ ಕಡಿಮೆ ಸಂಬಳ ನಿಗಧಿಗೊಳಿಸಿದ್ದರಿಂದ ಕೆಲಸವನ್ನು ಒಪ್ಪಿಕೊಳ್ಳದೆ ಅಧ್ಯಾಪಕ ವೃತ್ತಿಗೇ ಹಿಂತಿರುಗಿದರು. ಪುನಃ ೧೯೭೪ ರಲ್ಲಿ ಡೆಪ್ಯುಟಿ ಕಂಟ್ರೋಲರ್ ಆ... ನೇಮಕಗೊಂಡರೂ, ಸಂಬಳಕ್ಕೆ ಸಂಬಂಧಪ... ವಿಷಯದಿಂದಲೇ ಬಹುಬೇಗ ಹಿಂದಕ್ಕೆ ಬಂದ... ಪ್ರಾಮಾಣಿಕವಾದ ರೀತಿಯಲ್ಲಿ ತಮ್ಮ ಕೆ... ಮಾಡಿ ಉತ್ತಮ ಹೆಸರನ್ನು ಸಂಪಾದನೆ ಮಾ...ದ್ದ ಇವರಿಗೇನೆ ಯಾಕೆ ವಿ.ವಿ.ದ ಅಧಿಕಾರಿಗ... ಹೀಗೆ ಮಾಡಿದರು ಎಂಬುವ ಹಿನ್ನೆಲೆಯ... 'ಇವರು ದಲಿತ ಜನಾಂಗಕ್ಕೆ ಸೇರಿದವರು' ಎಂ...ವ ಅಂಶ ಬಹಳವಾಗಿ ಕೆಲಸ ಮಾಡಿದೆ.

ಸರ್ಕಾರಿ ಕಾಯ್ದೆಯ ಪ್ರಕಾರ ೧೯೮೦... ಪ್ರವೃತ್ತಿ ಹೊಂದಿದ ಇವರು ವಿಶ್ವವಿದ್ಯಾನಿಲಯ... ನಿಯಮದ ಪ್ರಕಾರ ಪುನರ್‌ನೇಮಕವಾಗಿದ್ದ... ಇಲ್ಲಿಯವರೆಗೆ ಯುವರಾಜ ಕಾಲೇಜಿನ ಅಧ್ಯಾ... ರಾಗಿಯೇ ತಮ್ಮ ಮೂವತ್ತು ವರ್ಷಗಳ ಸೆ... ಸಲ್ಲಿಸಿರುವರು. ಇವರ ಜೊತೆಯವರು ರೀಡ... ಪ್ರೊಫೆಸರ್, ರಿಜಿಸ್ಟ್ರಾರ್, ಕಂಟ್ರೋಲರ್‌ಗಳ... ಪದವಿ ಪುರಸ್ಕಾರಗಳನ್ನು ಅವರು ಮೇಲುವ... ದವರು ಎಂಬುವ ಕಾರಣಕ್ಕಾಗಿಯೇ ಪಡೆ... ಕೊಂಡರೆ, ಎಲ್ಲಾ ರೀತಿಯ ಅರ್ಹತೆಗಳಿದ... ಕೀಳುಜಾತಿಯವರು ಎಂಬುವ ಕಾರಣಕಾ... ಪದವಿ ಪುರಸ್ಕಾರಗಳಿಂದ ಇವರು ವಂಚಿತರಾ...ದ್ದಾರೆ. ಇವರು ಒಳ್ಳೆಯ ಅಧ್ಯಾಪಕರಾ... ಸಾಮಾಜಿಕ ಚಿಂತಕರಾಗಿ 'ಓಬವ್ವ' ಮ... 'ಛಲವಾದಿ ಜನಾಂಗ' ಎಂಬ ಎರಡು ಕೃತಿ...ನ್ನೂ, ಹಲವಾರು ವೈಚಾರಿಕ ಲೇಖನಗಳನ... ಪ್ರಕಟಿಸಿದ್ದಾರೆ.

—ದೇ...

ಮೈಸೂರು ವಿ.ವಿ.ಯ ಕಣ್ಣೊರೆಸುವ ಕಲ್ಯಾಣ ನಿ...

ಮೈಸೂರು ವಿ.ವಿ.ದ. ಕಲ್ಯಾಣ ನಿಧಿ (Amelioration of S.C, S.T. and B.T. Funds)ಯ ಯೋಜನೆಯನ್ನು ೧೯೭೮-೭೯ ಸಾಲಿನಲ್ಲಿ ತೆರೆಯಿತು. ಇದರ ಪ್ರಕಾರ ಹಾಸ್ಟಲಿಗೆ ಸೇರುವ ದಲಿತ ಹುಡುಗರಿಗೆ ೫೦%ನಷ್ಟು, ಹಾಸ್ಟಲಿಗೆ ಕಟ್ಟಬೇಕಾದ ಮುಂಗಡ ಹಣವನ್ನು ಕೊಡುವುದಕ್ಕಾಗಿ, ವಿಶೇಷ ತರಗತಿಗಳನ್ನು ನಡೆಸುವುದಕ್ಕಾಗಿ, ಹಾಸ್ಟಲಿನಲ್ಲಿ ಸ್ಥಳಾವಕಾಶ ದೊರೆಯದವರಿಗೆ ಬಾಡಿಗೆ ಕೊಠಡಿಗಳನ್ನು ಮಾಡಿಕೊಂಡಿದ್ದರೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳಂತೆ ಕೊಡಲು ಈ ಹಣವನ್ನು ಬಳಸಲಾಗುವುದೆಂದು ವಿ.ವಿ.ಯದ ರಿಪೋರ್ಟ್‌ತಿಳಿಸುವುದು. ಇದೂ ಅಲ್ಲದೆ ದಲಿತ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಕೊಡಿಸಲು, ಬಟ್ಟೆಗಳನ್ನು ಕೊಡಿಸಲು, ವಿಜ್ಞಾನದ ಮತ್ತು ಕಲಾಶಾಲೆಯಲ್ಲಿ ಓದುವವರಿಗೆ ವೈಜ್ಞಾನಿಕ ಹಾಗೂ ಕಲೆಗೆ ಸಂಬಂಧಪಟ್ಟ ಉಪಕರಣಗಳನ್ನು ಕೊಡಿಸಲು, ಯಾರಾದರೂ ವಿದ್ಯಾರ್ಥಿಗಳು ಬರೆಯುವವರಿದ್ದರೆ ಅವರ ಬರವಣಿಗೆಗಳನ್ನು ಪ್ರಕಟಿಸಲು ಈ ಹಣವನ್ನು ಖರ್ಚು ಮಾಡಲಾಗುವುದೆಂಬ ದಾಖಲೆಗಳಿವೆ.

ಮಹರಾಜ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಹತ್ತಿರತ್ತಿರ ೩೫೦-೦೦ ಕ್ಕಿಂತಲೂ ಹೆಚ್ಚು, ಮುಂಗಡ ಹಣ ಕೊಡಬೇಕಾದಾಗ, ವಿಶ್ವ ವಿದ್ಯಾನಿಲಯದವರು ನೂರು ರೂಪಾಯಿ ಮುಂಗಡವಾಗಿ ಕೊಡುತ್ತಾರಲ್ಲದೆ, ಅವ್ಯವಸ್ಥಿತವಾದ ರೀತಿಯಲ್ಲಿ ದಲಿತ ಹುಡುಗರಿಗೆ ಸಂಜೆಯ ತರಗತಿಗಳನ್ನು ನಡೆಸುತ್ತಿದ್ದಾರೆ. (ಅದೂ ವಿಜ್ಞಾನದ ಹುಡುಗರಿಗೆ ಪಾಠಹೇಳಿಸುವುದಿಲ್ಲ. ರಿಪೋರ್ಟಿನಲ್ಲಿ ವಿಜ್ಞಾನದ ಹುಡುಗರಿಗೂ ಪಾಠ ಹೇಳಿಸುತ್ತೇವೆಂದು ದಾಖಲಾಗಿದೆ.) ಸ್ವಲ್ಪ ಹುಡುಗರಿಗೆ ರೂಮು ಬಾಡಿಗೆ ಕೊಡುತ್ತಿದ್ದಾರೆ. ಇದು ಬಿಟ್ಟರೆ ಯಾರಿಗಾದರೂ ಪಠ್ಯ ಪುಸ್ತಕಗಳನ್ನು ಕೊಡಿಸಿರುವ, ವಿಜ್ಞಾನ ಅಥವಾ ಕಲಾಶಾಲೆಯ ಉಪಕರಣಗಳನ್ನು ಕೊಡಿಸಿರುವ, ಬಟ್ಟೆಗಳನ್ನು ಕೊಡಿಸಿರುವ, ವಿದ್ಯಾರ್ಥಿಗಳು ಬರೆದ ಪುಸ್ತಕಗಳ... ಅಚ್ಚು ಮಾಡಿಸಿರುವ ಉದಾಹರಣೆಗಳೊಂ...ದರೂ ತಪ್ಪಿಯೂ ಸಿಗುತ್ತಿಲ್ಲ--ಸರ್ಕಾರದ ಮ... ಯು.ಜಿ.ಸಿ.ಯವರ ಕಣ್ಣಿಗೆ ಮಣ್ಣೆರಚಲು ವಿ...ವಿದ್ಯಾನಿಲಯ ಹೂಡಿರುವ ಮಹಾ ಕುತಂ...ಗಳಲ್ಲಿ ಇದೂ ಒಂದು. ಈಗ ಅಂಕಿ ಅಂಶ...ನ್ನೊಂದಿಷ್ಟು ಗಮನಿಸಬೇಕು : ೧೯೭೮-... ೧೯೭೯-೮೦, ೧೯೮೦-೮೧, ೧೯೮೧-೮೨, ... ಕಲ್ಯಾಣ ನಿಧಿಯ ಯೋಜನೆಗಾಗಿ ತೆಗೆದಿ... ಹಣ ಕ್ರಮವಾಗಿ ಮೊದಲ ಮೂರು ವರ್ಷ... ೨ಲಕ್ಷ; ಈ ಸಾಲಿಗಾಗಿ ೩ಲಕ್ಷ. ಆದರೆ ಖ... ಗಿರುವುದು ಕ್ರಮವಾಗಿ ರೂ. ೧೯೪೩೩೫-೬... ೮೨೪೮೪೩= ೬೦ ; ರೂ. ೪೯೨೭೩= ೧೪ ಹಾ... ಈ ವರ್ಷದ ಬಾಬ್ತಿಗಾಗಿ ಇದುವರೆಗೆ ಖ... ಮಾಡಿರುವುದು ೨೩ ಸಾವಿರದಷ್ಟು ಈ ಹಣವ... ಖರ್ಚುಮಾಡುವುದಕ್ಕಾಗಿ ಒಂದು ಕಮಿಟಿ ಇ... ಖರ್ಚಾಗಿರುವ ಬಹಳಷ್ಟು ಹಣ ಈ ಕಮಿಟಿ... ಸದಸ್ಯರ ಟಿ.ಎ., ಡಿ.ಎ.,ಗಾಗಿ ಖರ್ಚಾಗಿದೆ.

...ಮಿಗಾಗಿ ಹೋರಾಟ

...ಕೆನರಸೀಪುರ ತಾ|| ಕೆ. ಮುದ್ದನಹಳ್ಳಿ ...ವ ೫ಜನ ದಲಿತರು ಗಾಳಿಪುರ ಕಾವಲು ...೧೪೩, ೧೪೪, ೧೪೫, ೧೪೬, ೧೪೭ರಲ್ಲಿ ...ರೆ ೯ ಗುಂಟೆ ಭೂಮಿಗೆ ತಾ|| ೩-೫-೫೮ ...ಗುವಳಿ ಚೀಟಿ ಪಡೆದರು. ಇದನ್ನು ಸಹಿ ...ಗೋಡು ಗ್ರಾಮದ ಕೆ.ಜಿ. ಗಿಡ್ಡೇಗೌಡ ...ವೃತ್ತ ಅಧಿಕಾರಿ ಜಮೀನು ತನಗೆ ಸೇರ ...ು ಟ್ರಿಬ್ಯುನಲ್, ಮುನ್ಸೀಫ್‌ಕೋರ್ಟ್, ...ಕೋರ್ಟ್, ಹೈಕೋರ್ಟ್‌ಗಳಲ್ಲಿ ಅಪೀಲು ...ನ್ಯಾಯ ಸಿಗದೆ ಈ ದಲಿತರ ಮೇಲೆ ಹಲ್ಲೆ ... ಜಮೀನಿನ ಬೆಳೆ ನಾಶಮಾಡಿ,ರಾಜಕಾ... ಅಧಿಕಾರಿಗಳ ಇಕಮತ್ತಿನಿಂದ ಭೂಮಿ ...ಯನ್ನು ತನ್ನ ಹೆಸರಿಗೆ ಬರೆಸಿಕೊಂಡ.

...ಹ ಅನ್ಯಾಯಗಳನ್ನು ಬಯಲಿಗೆಳೆದು, ...ಡನಿಗೆ ರಕ್ಷಣೆ ಕೊಟ್ಟಿರುವ ಸರ್ಕಾರದ ...ನ್ನು ಖಂಡಿಸಿ ಹಾಸನ ಜಿಲ್ಲಾ.ದ.ಸಂ.ಸ. ...ಕ್ಕಾಗಿ ೯-೧೧-೮೧ ರಿಂದ ಜಿಲ್ಲಾಧಿಕಾರಿ ...ಮುಂದೆ ಹೋರಾಟ ಪ್ರಾರಂಭಿಸುತ್ತದೆ.

...ಹಶೀಲ್ದಾರ್ ಕುತಂತ್ರ

...ರ್. ನಗರ ತಾಲ್ಲೂಕು ಬ್ಯಾಡರಹಳ್ಳಿಯ ...ಾಳಯ್ಯ ಅದೇ ಗ್ರಾಮದಲ್ಲಿ ಸರ್ಕಾರದ ...ಬಿದ್ದಿರುವ ಕಟ್ಟೆಸರ್ವೆ ನಂ : ೨೧೩ರಲ್ಲಿ ... ೨೦ ಗುಂಟೆ ಜಮೀನನ್ನು ೪ ವರ್ಷದಿಂದ ...ಸನು ಮಾಡಿ ಬದುಕುತ್ತಿದ್ದ ಬಡವ. ...ದ ವಿಮುಕ್ತನಾಗಿ ತನ್ನ ಸಂಸಾರದ ೧೩ ...ು ಹೊಟ್ಟೆಯನ್ನು ಈ ಭೂಮಿಯಿಂದಲೇ ಈತ ತುಂಬಿಸುತ್ತಿದ್ದುದನ್ನು ಸಹಿಸದ ಊರ ಸವರ್ಣೀಯ ಛೇರ್ಮನ್ ಹಾಗೂ ಗ್ರಾಮಸ್ಥರು ಇವನು ಬೆಳೆದ ಫಸಲನ್ನುನಾಶ ಮಾಡಿದ್ದಲ್ಲದೆ, ತಹಶೀಲ್ದಾರರಿಗೆ ಅರ್ಜಿ ಬರೆದು ಊರಿನಲ್ಲಿ ಕೆರೆಗಳಿದ್ದರೂ ದನಕರುಗಳಿಗೆಕುಡಿಯಲು ಯೋಗ್ಯವಾದ ಕೆರೆ ಇಲ್ಲವೆಂದೂ, ಈ ದಲಿತನ ಜಮೀನು ಕೆರೆಗೆ ಲಾಯಕ್ಕಾದ ಸ್ಥಳವೆಂದೂ ತಿಳಿಸಿ ಈತ ಜಮೀನು ಬಿಡಬೇಕೆಂದು ತಹಶೀಲ್ದಾರ್ ಕಚೇರಿಯಿಂದ ೧೨-೧೦ ೮೧ರಂದು ಎವಿಕ್ಷನ್ ನೋಟೀಸು ಜಾರಿಮಾಡಿದ್ದಾರೆ.

ಈ ಕ್ರಮವನ್ನು ದ.ಸಂ.ಸ. ಪ್ರತಿಭಟಿಸುತ್ತದೆ.

ಬಿಟ್ಟಿ ಚಾಕರಿಯ ಕ್ರೂರ ಮುಖ

ತುಮಕೂರು ಜಿಲ್ಲಾ ಕುಣಿಗಲ್ ತಾಲ್ಲೂಕ್ ಯಲಗಲವಾಡಿ ಗ್ರಾಮದ ಹರಿಜನರು ಊರ ಕಸ ಗುಡಿಸಿ, ಮಲ ಮೂತ್ರ ಹೊರುವುದಲ್ಲದೆ ಸವರ್ಣೀಯರು ಸತ್ತರೂ ಅವರ ಕಳೇಬರದ ಜೊತೆ ಅಂದಿನ ಕೆಲಸ-ಕೂಲಿ ಬಿಟ್ಟು ಸ್ಮಶಾನದವರೆವಿಗೂ ತಮ್ಮಟೆ ನಗಾರಿ-ಓಲಗ ಭಾರಿಸಬೇಕು. ಹಬ್ಬ ಹರಿದಿನಗಳಲ್ಲಂತೂಸವರ್ಣೀಯ ಮಗು ಕರೆದರೂ ಹೋಗಬೇಕಾದ ಈ ಮಂದಿ 'ಸ್ವಲ್ಪ ತಡವಾಗಿ ಬರುತ್ತೇವೆ'ಎಂದರೂ ಸಾಕು ಊರ ಮುಖ್ಯಸ್ಥ ಮೀಸೆ ಈರಣ್ಣ, ಗಂಗಪ್ಪ, ಮತ್ತು ವೆಂಕಟರಾವ್ ರಿಂದ ನೆಂಟರಿಷ್ಟರ ನಡುವೆ 'ಏಟುಗಳ ಹಬ್ಬ' ಆಗಿರುತ್ತೆ. ಊರಿನ ದೇವಸ್ಥಾನ, ಕೆರೆ, ಬಾವಿ, ಹೋಟೆಲು, ಶಿಶುವಿಹಾರಗಳಿಂದ ಬಹಿಷ್ಕೃತರಾಗಿರುವುದರ ಜೊತೆಗೆ ಹರಿಜನ ಹೆಣ್ಣು ಮಕ್ಕಳು ಪ್ಲೋರ್ ಮಿಲ್‌ಗೆಹೋದಾಗ ಹೊಲತಿ, ಮಾದಗಿತ್ತಿ ಎಂದೆಲ್ಲಾ ಅನ್ನಿಸಿಕೊಳ್ಳಬೇಕಾಗುತ್ತದೆ.

ಬಾಬುರಾವ್ ಕೊಲೆ : ಖಂಡನಾ ಸಭೆ

ಹುಣಸಗೇರಾದ ಬಾಬೂರಾವ್ ಕೊಲೆಯನ್ನು ಖಂಡಿಸಲು ಬಿ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ದ.ಸಂ.ಸ.ದ ಭದ್ರಾವತಿ ಶಾಖೆ ದಿ.೪-೯.೮೧ರಂದು ಖುಡನಾ ಸಭೆ ನಡೆಸಿತು.

ಸಭೆಯು ಅಪರಾಧಿಗಳನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದೂ, ಪ್ರಮುಖ ಆರೋಪಿ ಮಾಜಿಮಂತ್ರಿಯೊಬ್ಬರ ಮಾವನಾದುದರಿಂದ ಪ್ರಭಾವ ರಹಿತ ವಿಚಾರಣೆ ನಡೆಯಬೇಕೆಂದೂ, ಸತ್ತ ಬಾಬೂರಾವ್‌ರ ಕುಟುಂಬಕ್ಕೆ ಪರಿಹಾರ ಕೊಡಬೇಕೆಂದೂ, ಸರ್ಕಾರಕ್ಕೆ ಒತ್ತಾಯಿಸಿತು.

ಈಗಿನ ಪಂಚಾಯ್ತಿ ಅಧ್ಯಕ್ಷರ ಮನೆಯೇ ಅಂಚೆ ಕಛೇರಿಯೂ ಆಗಿರುವುದರಿಂದ ಹರಿಜನರ ನೆರಳು ಆ ಕಡೆ ಬಿದ್ದರೆ ಅಮಾನವೀಯವಾಗಿ ನಡೆದುಕೊಳ್ಳುವ ಈತ ಹರಿಜನರ ಪತ್ರವ್ಯವಹಾರ ಸಕಾಲಕ್ಕೆ ದೊರಯದಂತೆ ವ್ಯವಸ್ಥೆ ಮಾಡಿದ್ದಾನೆ. ಇವರ ಮಗ ವೆಂಕಟರಾವ್ ಹರಿಜನರಿಗೆ ಭೂಮಿ ಕೊಡಿಸುವ ಆಮಿಷ ತೋರಿ ಅವರಿಂದ ಹಣ ವಸೂಲಿ ಮಾಡುವುದೂ ಅಲ್ಲದೆ ಸರಬರಾಜು ಸೊಸೈಟಿಯಲ್ಲಿ ಹರಿಜನರ ಹೆಸರಿನಲ್ಲಿ ಸಿಗುವ ಸಕ್ಕರೆ, ಅಕ್ಕಿ, ಗೋಧಿಯನ್ನು ತನಗೆ ಬೇಕಾದವರಿಗೆ ಕೊಡಿಸುತ್ತಾನೆ.

ಕುಡಿವ ನೀರಿಗೂ ಗತಿಯಿಲ್ಲದ ಇಲ್ಲಿನ ಹರಿಜನರ ಕೇರಿಗೆ ಸರಕಾರದ ಯಾವುದೇ ಸವಲತ್ತು ಸಿಗದಂಗೆ, ಸ್ವತಂತ್ರವಾಗಿ ಬದುಕದಂಗೆ ನೋಡಿಕೊಳ್ಳುವಲ್ಲಿ ಈ ಸವರ್ಣೀಯ ಮಂದಿ ಚಾಲೂಕರಾಗಿದ್ದಾರೆ. ●

.........ನರಳುತ್ತಿರುವ ದಲಿತರು

(ಮೂರನೇ ಪುಟದಿಂದ)

ಇಂಥಹದನ್ನೆಲ್ಲಾ ಸಹಿಸದ ಕೆಲವು ದಲಿತ ವಿದ್ಯಾರ್ಥಿಗಳು 'ಬೆಂಗಳೂರು ವಿ.ವಿ.ಯ ದಲಿತ ವಿದ್ಯಾರ್ಥಿ ಸಮಿತಿ' ಮುಖಾಂತರ ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಕುಲಪತಿಯವರಿಗೆ ದಿನಾಂಕ ೨೫-೪-೮೧ರಂದು ಮನವಿ ಸಲ್ಲಿಸಿದ್ದು ಈ ಮುಖ್ಯಸ್ಥನ ಗಮನಕ್ಕೆ ಬಂದು ಇಲಾಖೆಯ ದಲಿತ ವಿದ್ಯಾರ್ಥಿಗಳಿಗೆ ನೀವು ಪಾಸಾಗುವುದಿಲ್ಲವೆಂದು ಹೆದರಿಸುವುದರ ಪರಿಣಾಮವಾಗಿ ರಾಮದುರ್ಗಯ್ಯನೆಂಬ ದಲಿತ ವಿದ್ಯಾರ್ಥಿ ಪರೀಕ್ಷೆಗೇ ಕೂರಲಿಲ್ಲ. ಇವನು ಮಾಡುತ್ತಿರುವ ಅನ್ಯಾಯಗಳನ್ನು ಸಹಿಸದೆ ಅಧ್ಯಾಪಕರುಗಳು ವಿದ್ಯಾರ್ಥಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಲೆಕ್ಕವಿಲ್ಲದಷ್ಟು ದೂರು ಕೊಟ್ಟಿದ್ದರೂ ಈ ಕುಲಗೆಟ್ಟ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಮುಖ್ಯಸ್ಥನಾಗಿಯೇ ಉಳಿದಿರುವ ಹಿನ್ನೆಲೆಯಾದರೂ ಏನು ?

ನಯವಂಚಕಾಧಿಪತಿ ಹೆಗ್ಗಡೆ ಎಂಬ ಉಪಕುಲಪತಿ

ಶೇ. 5 ಅಧ್ಯಾಪಕರು ಮತ್ತು ಇತರ ಅಧ್ಯಾಪಕೇತರ ಕಡೆಗಳಲ್ಲು ಇದೇ ದುಸ್ಥಿತಿಯಲ್ಲಿ ದಲಿತರ ಸಂಖ್ಯೆ ಇದೆ. ಈ ಹಿಂದೆ ಮೀಸಲಾತಿ ಇಲ್ಲದೆಯೂ ಕೂಡ ದಲಿತರ ಪ್ರಮಾಣ ಮೇಲಿನ ಶೇಕಡಾವಾರುಗಿಂತ ಉತ್ತಮ ಮಟ್ಟದಲ್ಲೇ ಇದ್ದಂಥ ವಾಸ್ತವಕ್ಕೆ ಹೋಲಿಸಿದಾಗ **ಹಾಲಿ ಉಪಕುಲಪತಿಯ ಕ್ರೂರ ಜಾತೀಯತೆ ಮನದಟ್ಟಾ**ಗುವುದು.

ದಲಿತರಿಗೆ ಉದ್ಯೋಗ ವಂಚಿಸಿರುವುದು ನೂರೆಂಟು ನಡೆದಿವೆ. ಆ ನೂರೆಂಟೂ ನೂರೆಂಟು ರೀತಿಯ ತಂತ್ರದಲ್ಲಿ ನಡೆದಿವೆ. ಉದಾಹರಣೆಗೆ ಎನ್.ಎಸ್.ಎಸ್. ಕೋಆರ್ಡಿನೇಟರ್ ಹುದ್ದೆ ದಲಿತರಿಗೆಂದೆ ಮೀಸಲಾಗಿ ಜಾಹಿರಾತು ಆಯ್ತು. ಸಂದರ್ಶನಕ್ಕೆ ಸಮರ್ಥ ಅನುಭವಿ ದಲಿತ ಅಭ್ಯರ್ಥಿ ಶ್ರೀ ಕೆ. ಬಿ. ಗಂಗಾಧರ್ ಬಂದುದು ಎಲ್ಲರಿಗೂ ನುಂಗಲಾರದ ತುತ್ತಾಯ್ತು. ಗಂಗಾಧರ್‌ಗೆ ಆ ಹುದ್ದೆ ದಕ್ಕಿಬಿಡಬಹುದೆಂದು ಇದೇ ಹುದ್ದೇನ ಪುನಃ ಜಾಹಿರಾತುಗೊಳಿಸುವ ಸಂಚು ನಡೆದಿದೆ. ಸಮಾಜಶಾಸ್ತ್ರ ವಿಭಾಗದಲ್ಲಿ ದಲಿತರಿಗೆ ಮೀಸಲಾಗಿದ್ದ ಅಧ್ಯಾಪಕರ ಹುದ್ದೆಗೆ ಶೇ. 57ನ್ನು ಪಡೆದ ಅನುಭವಿ ದಲಿತ ಅಭ್ಯರ್ಥಿ ದೊಡ್ಡಸಿದ್ದಯ್ಯನವರ ಆಯ್ಕೆ ಮಾಡದೆ, ಶೇ. 52ನ್ನು ಪಡೆದ ಕಮ್ಮಿ ಅನುಭವದ ಸವರ್ಣೀಯನಿಗೆ ಶಿಪಾರಸ್ಸು ಮಾಡಿ, ಈ ಮಾನಗೆಟ್ಟ ಕೆಲಸವನ್ನು ಉಪಕುಲಪತಿ ಎತ್ತಿ ಹಿಡಿದಿರುವುದು ನಡೆದಿದೆ. ಇದೇ ವಿಭಾಗದ ಮೀಸಲಾದ ರೀಡರ್ ಹುದ್ದೆಗೆ ಹನ್ನೆರಡು ವರ್ಷ ಅನುಭವ ಇರುವ ಕೆ. ಸುಮಿತ್ರಾಬಾಯಿಯವರನ್ನು ಆಯ್ಕೆ ಮಾಡದೆ, ಅರ್ಥಶಾಸ್ತ್ರ ವಿಭಾಗದಲ್ಲಿ ರುದ್ರಪ್ಪನವರನ್ನು ದಲಿತರೆಂಬ ಕಾರಣಕ್ಕೆ ಮೀಸಲಾತಿ ಇದ್ದೂ ಆಯ್ಕೆ **ಮಾಡದೆ, ಇತರ ವಿಭಾಗದಲ್ಲಿ ಇವರಿಗಿಂತಲೂ ಕಮ್ಮಿ ಅನುಭವದ ಸವರ್ಣೀಯರನ್ನು ಆಯ್ಕೆ** ಮಾಡಿ ಅದು ರಾಜ್ಯಪಾಲರಿಂದ ತಿರಸ್ಕೃತವಾಗಿದೆ. ಭೂಗರ್ಭ ಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಅನುಭವಿ ದಲಿತ ಅಧ್ಯಾಪಕ ಡಾ. ಬಿ. ಜೆ. ನಾಗರಾಜರು ಇರುವುದರಿಂದ ಕಳೆದ ಮೂರು ವರ್ಷಗಳಿಂದಲೂ ಈ ವಿಭಾಗದ ರೀಡರ್ ಪ್ರೊಫೆಸರ್ ಹುದ್ದೆಗಳ ಸಂದರ್ಶನ ಮುಂದೂಡುತ್ತಿದ್ದು, ಈಗ ಸವರ್ಣೀಯನೊಬ್ಬನಿಗೆ ಡಾಕ್ಟರೇಟ್ ಕೊಟ್ಟು ಸಂದರ್ಶನ ನಡೆಸಲು ಏರ್ಪಾಡಾಗುತ್ತಿದೆ. ಇಂಥ ಅಸಹನೆ ಸಹಿಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ ದಲಿತರು ಬಾಳಾಟ ನಡೆಸಬೇಕಾಗಿದೆ.

ಇನ್ನು ಹಂಗಾಮಿ ಉದ್ಯೋಗ ಪಡೆಯಲು ಬರುವ ಅರೆಹೊಟ್ಟೆ ದಲಿತರನ್ನು ಈ ಉಪಕುಲಪತಿಯು ನೊಡೋಣ ಕೊಡೋಣ ಎನ್ನುತ್ತಲೆ ಅಲೆಸಲಿಸಿ ಅರ್ಧ ಸಾಯಿಸಿ ಬಿಡುವನು. ಆ ಮೇಲೆ ದಲಿತರಿಗೆ ನೆಪಕೊಟ್ಟು ಕೈಕೊಟ್ಟು ಸವರ್ಣೀಯರಿಗೆ ಪ್ರಭಾವಿತರಿಗೆ ಹಣ ಉಳ್ಳವರಿಗೆ ಉದ್ಯೋಗ ಸಿಕ್ಕುವುದು. ಇತ್ತೀಚೆಗೆ ಪತ್ರಿಕೋದ್ಯಮ ವಿಭಾಗದಲ್ಲಿ ಮೂರು ಹಂಗಾಮಿ ಉದ್ಯೋಗ ಖಾಲಿಯಾದಾಗ ಉಪಕುಲಪ[ತಿ] ದಲಿತ ಉದ್ಯೋಗಾರ್ಥಿಗಳಾದ ಮರಿಸ್ವಾ[…] ಮಹೇಶ್‌ಚಂದ್ರಗುರು ಅವರನ್ನು ಅಲೆ[…] ತಳ್ಳುತ್ತ ಬಂದನು. ಕೊನೆಗೆ ಆ ಮ[…] ಉದ್ಯೋಗವೂ ಸವರ್ಣೀಯರ ಪಾಲಿಗಾದ[…] ದಲಿತರು ಯಾಕೆಂದು ಕೇಳಿದಾಗ ಉಪಕು[…]ಯ ಉತ್ತರ **'ದಲಿತರಿಗೆ ಶೇ. 55 ಬಂ[…] ಎಂತು! ಆದರೆ ಉದ್ಯೋಗ ಪಡೆದ ಸವರ್ಣೀ[…]**ರು ಶೇ. 55 ಪಡೆದಿಲ್ಲದಿದ್ದರೂ ಅ[…] ಉದ್ಯೋಗ ನೀಡಿರುವ ಉಪಕುಲಪತಿಯು ಸ್ವಂತ ನಾಲಿಗೆಯಿಂದಲೇ ಮೇಲಿನ ಮಾ[…]ದ್ದನು! ಸುಳ್ಳು ನೆಪ ವಂಚನೆಯಿಂದಾದ ಎ[…]ಲ್ಲದ ಈತನ ನಾಲಿಗೆಯನ್ನು ಕತ್ತರಿಸಿದರೂ [ಅಪ]ರಾಧವಲ್ಲ ಎಂಬಷ್ಟು ಹೆಗ್ಗಡೆಯ ನಾಲಿಗೆ ಅಪ್ರಮಾಣಿಕವಾಗಿ ಕೊಳಕಾಗಿದೆ.

ದ್ವಿಜರೆಂಬ ಪಾತಕರೆ, ಆವುದು ಬ್ರಾಹ್ಮಣ್ಯ ?

ಶಿವಾ ಶಿವಾ ದ್ವಿಜರೆಂಬ ಪಾತಕರು ನೀವು ಕೇಳಿ ಭೋ
ನೀವು ಎಲ್ಲ ಜಾತಿಗೂ ನಾವೇ ಮಿಗಿಲೆಂದು
'ವರ್ಣನಾಂ ಬ್ರಾಹ್ಮಣೋ ಗುರುಃ' ಎಂದು
ಬಳ್ಳಿಟ್ಟು ಬಾಸ್ಕಳ ಗೆಡುವು ತಿಪ್ಪಿರಿ ನೋಡಾ
'ಆದಿ ಬಿಂದುದ್ಭವವೆ ಬೀಜಂ' ಎಂಬ ಶೃತಿಯಂ ತಿಳಿದು ನೋಡಲು
ಆದಿಯಲ್ಲಿ ನಿಮ್ಮ ಮಾತಾಪಿತರ ಕೀವು ರಕ್ತದ ಮಿಶ್ರದಿಂ
ನಿಮ್ಮ ಪಿಂಡ ಉದಯಿಸಿತ್ತು.
ಆ ಕೀವು ರಕ್ತಕ್ಕೆ ಆವ ಕುಲ ಹೇಳಿರೆ?
ನಾನು ಉತ್ತಮದ ಬ್ರಾಹ್ಮಣರೆಂಬ ನಿಮ್ಮ ದೇಹ ಬ್ರಹ್ಮನೋ
ನಿಮ್ಮ ಪ್ರಾಣ ಬ್ರಹ್ಮನೊ ಅವುದು ಬ್ರಾಹ್ಮಣ್ಯ?
ಬಲ್ಲಡೆ ಬಗುಳಿರೆ, ಅರಿಯದಿರ್ದಡೆ ಕೇಳಿ
ನಿಮ್ಮಿಂದ ಏಳುಬೆಲೆ ಹೊರಗಾದ ಹೊಲೆಯನೆ ಉತ್ತಮ
ಕುಲಜನೆಂದು ಮುಂಡಿಗೆಯ ಹಾಕಿದೆನು.
ಎತ್ತಿರೋ ಸತ್ಯ ಉಳ್ಳಡೆ; ಅಲ್ಲದಡೆ ಬಾಯ ಮುಚ್ಚಿಕೊಳ್ಳಿ.

—ವೀರಶಂಕರ ದಾಸಯ್ಯ

ವೀರಶಂಕರ ದಾಸಯ್ಯ ಹಾಕಿದ ಈ ಸವಾಲನ್ನು ಯಾರೂ ಸ್ವೀಕರಿಸಿದಂತೆ ಕಾಣುವುದಿಲ್ಲ. ಜಾತಿಯೆಂಬುದು ಸಮಾಜದ ಹುಸಿಸ್ತರವೆಂದು ಹೇಳುತ್ತಾ ಹುಟ್ಟಿದ ಮೂಲವನ್ನೇ ಶಂಕರದಾಸಯ್ಯ ಕೇಂದ್ರವನ್ನಾಗಿಸಿಕೊಂಡಿದ್ದಾರೆ. ಆವುದು ಬ್ರಾಹ್ಮಣ್ಯ? ಎಂದು ಕೇಳುವ ಈತ ಬ್ರಾಹ್ಮಣರೆನಿಸಿಕೊಳ್ಳುವ ಅಧಮರಿಗಿಂತ ಕಾಯಕದಲ್ಲಿ ತೊಡಗಿದ ಹೊಲೆಯರೇ ಉತ್ತಮ ಎಂದು ಹೇಳಿ, ಧೈರ್ಯವಿದ್ದರೆ ಅಲ್ಲ ಎಂದು ಹೇಳುವಂತೆ ಸವಾಲೆಸೆದಿದ್ದಾನೆ.

—ಲಿಂಗದೇವರು ಹಳೇಮನೆ

....ಬತ್ತಲೆ ಕೊಲೆಗಳು

ವುದು ೧೭-೧೦-೮೧ರಂದು. ಲಂಚ ತಿಂದ [ಪೋ]ಲೀಸ್ ಅಧಿಕಾರಿಗಳು ಮತ್ತು ಡಾಕ್ಟರ ಕೈ[…]ದಿಂದ ಮುಚ್ಚಿಹೋಗಿರುವ ಈ ಕೊಲೆಯ [ನ್ಯಾ]ಯಾಂಗತನಿಕೆಗೆ ಒತ್ತಾಯಿಸಿ ಸ್ಥಳೀಯ ದ.ಸ[…] ದಿನಾಂಕ ೧೨-೧೧-೮೧ ರಂದು ಚಿಲ್ಕುಂದ[…] ಹುಣಸೂರಿಗೆ ಕಾಲ್ನಡಿಗೆ ಜಾಥಾ ನಡೆಸಲಿದೆ.

2 ತುಮಕೂರು ತಾ॥ ಅಂತರಸನಹಳ್ಳಿ[…] ಬೋವಿ ಯಲ್ಲಯ್ಯನ ಮಗಳು ವಿಶಾಲಾಕ್ಷಿ ತೋ[…]ದಲ್ಲಿ ಸೌದೆ ಪುಳ್ಳೆ ಕಿತ್ತಳೆಂದು ಸಿದ್ಧಗ[…] ಬಿ.ಎಡ್ ಕಾಲೇಜಿನ ಉಪನ್ಯಾಸಕ ಸಿ. ಹ[…] ಮರಿದೇವರು ಮತ್ತು ಹೆಂಡತಿ ಅಂಬಿಕಾ[…]ಯನ್ನು ಕೈಕಾಲು ಕಟ್ಟಿ ಹೊಡೆದು, ಹಿ[…] ತಮ್ಮ ತೋಟದ ಬಾವಿಗೆ ನೂಕಿ ಕೊಲೆ ಮ[ಾಡಿ]ದ್ದಾರೆ.

10—10—81 ರಂದು ನಡೆದ [ಈ] ಕೊಲೆಗೆ ಬಲವಾದ ಸಾಕ್ಷ್ಯಾಧಾರಗಳಿದ್ದ[ು] "ಮರಿದೇವರು ಕೊಲೆಗೆ ಕಾರಣ[…] ಹೊರತು ಕೊಲೆಗಾರನಲ್ಲ" ಎಂದಿರುವ ಡಿ.[…] ಎಸ್.ಪಿ. ಆತನನ್ನು ಇನ್ನೂ ಬಂಧಿಸದೆ, ದ[…] ನೀಡಲು ಹೋದ ಹುಡುಗಿಯ ತಂದೆ ತ[…]**ಯನ್ನೇ ಗದರಿಸಿ ಕಳುಹಿಸಿ, ಇದು ಆತ್ಮ[…] ಎಂದು ದಾಖಲು ಮಾಡಿಕೊಂಡಿದ್ದಾರೆ.**

ಪೋಲೀಸರ ಅಸಡ್ಡೆ ಹಾಗೂ ಷಾಮೀಲು […]ಯನ್ನು ಪ್ರತಿಭಟಿಸಿ ತುಮಕೂರು ಜಿ[…] ದ.ಸಂ.ಸದ ಆಶ್ರಯದಲ್ಲಿ ಸುತ್ತಲಿನ ನಾ[…] ಹಳ್ಳಿಗಳ ಎಲ್ಲಾ ಜಾತಿಯ ಬಡವರೂ ಕಾಲ್ನ[ಡಿಗೆ]ಯಲ್ಲಿ 22-10-81ರಂದು ತುಮಕೂ[ರಿಗೆ] ಜಾಥಾ ಬಂದು ಅಪರಾಧಿಗಳನ್ನು ಬಂಧಿ[…] ನ್ಯಾಯಾಂಗ ತನಿಖೆಯಾಗಬೇಕೆಂದು ಜಿಲ್ಲಾ[ಧಿ]ಕಾರಿಗಳನ್ನು ಒತ್ತಾಯಿಸಿರುವರು.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವ[ರಿಂದ] ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-570008.